# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು – 570006

**ದಿನಾಂಕ: 15.09.2023ರಂದು ಪೂರ್ವಾಹ್ನ 11.00** ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಾದ ಪ್ರೊ. ಶರಣಪ್ಪ ವಿ. ಹಲಸೆ ರವರ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾನಿಲಯದ ಆಡಳಿತ ಕಟ್ಟಡದ ವ್ಯವಸ್ಥಾಪನಾ ಮಂಡಳಿ ಸಭಾಂಗಣದಲ್ಲಿ ನಡೆದ ವ್ಯವಸ್ಥಾಪನಾ ಮಂಡಳಿಯ **174ನೇ** ಸಾಮಾನ್ಯ ಸಭೆಯ ನಡಾವಳಿ.

| ಉಪಸ್ಥಿತರು | |
|---|---|
| **ಪ್ರೊ. ಶರಣಪ್ಪ ವಿ. ಹಲಸೆ**<br>ಮಾನ್ಯ ಕುಲಪತಿಗಳು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು<br>ಕರಾಮುವಿ, ಮೈಸೂರು. | **ಪ್ರೊ ಕೆ.ಎಲ್.ಎನ್. ಮೂರ್ತಿ**<br>ಕುಲಸಚಿವರು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಕಾರ್ಯದರ್ಶಿಗಳು<br>ಕರಾಮುವಿ, ಮೈಸೂರು. |
| **ಪ್ರೊ. ಲಕ್ಷ್ಮಿ .ಎನ್**<br>ಡೀನ್(ಶೈಕ್ಷಣಿಕ) ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು,<br>ಕರಾಮುವಿ ಮೈಸ್ರರು. | **ಶ್ರೀಮತಿ. ಉಮಾ .ಕೆ**<br>ಜಂಟಿ ಕಾರ್ಯದರ್ಶಿ<br>ಹಣಕಾಸು ಇಲಾಖೆ (ವೆಚ್ಚಗಳು) ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಸದಸ್ಯರು,<br>ಬೆಂಗಳೂರು – 560 001<br>**ಆನ್‌ಲೈನ್ ಮುಖಾಂತರ ಹಾಜರಿರುತ್ತಾರೆ.** |
| **ಶ್ರೀ ಅಡಗೂರು ಹೆಚ್. ವಿಶ್ವನಾಥ್**<br>ವಿಧಾನ ಪರಿಷತ್ ಶಾಸಕರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮನೆ ನಂ. 1179, 3ನೇ ಮೇನ್, 3ನೇ ಕ್ರಾಸ್<br>ಅರವಿಂದ ನಗರ, ಮೈಸೂರು ಜಿಲ್ಲೆ | **ಶ್ರೀ. ಬಿ.ಜಿ. ಪಾಟೀಲ್**<br>ವಿಧಾನ ಪರಿಷತ್ ಶಾಸಕರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮನೆ ನಂ. ಇ/8/862, ಐರಾವಳಿ, ನೆಹರು ಗೂಂಜ್,<br>ಕಲಬುರಗಿ – 585104 |
| **ಶ್ರೀ. ಡಿ. ರವಿಶಂಕರ್**<br>ವಿಧಾನಸಭಾ ಸದಸ್ಯರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ.139/1, ಕೆಸ್ತೂರು ಕೊಪ್ಪಲು ಗ್ರಾಮ,<br>ಕೆಸ್ತೂರು ಅಂಚೆ, ಕೃಷ್ಣರಾಜನಗರ ತಾಲ್ಲೂಕು,<br>ಮೈಸೂರು ಜಿಲ್ಲೆ. | **ಶ್ರೀ. ಕೆ. ಹರೀಶ್ ಗೌಡ**<br>ವಿಧಾನಸಭಾ ಸದಸ್ಯರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ.1, ಸಿ.ಹೆಚ್.35, ಕಾಂತರಾಜು ಅರಸ್ ರಸ್ತೆ,<br>ಕೆ.ಜಿ.ಕೊಪ್ಪಲು, ಮೈಸೂರು - 570009 |

ಕುಲಸಚಿವರು ಮಾತನಾಡಿ, ವಿಶ್ವವಿದ್ಯಾನಿಲಯದ ವ್ಯವಸ್ಥಾಪನಾ ಮಂಡಳಿಗೆ ಕರ್ನಾಟಕ ವಿಧಾನಸಭಾ ಸದಸ್ಯರುಗಳಾದಂತಹ ಶ್ರೀ. ಕೆ.ಹರೀಶ್ ಗೌಡ ಹಾಗೂ ಶ್ರೀ. ಡಿ. ರವಿಶಂಕರ್ ಇವರುಗಳನ್ನು ಸದಸ್ಯರುಗಳನ್ನಾಗಿ ಕರ್ನಾಟಕ ಸರ್ಕಾರವು ನಾಮ ನಿರ್ದೇಶನ ಮಾಡಿ ಆದೇಶಿಸಿದ್ದು, ಸದರಿ ಮಾನ್ಯ ಸದಸ್ಯರುಗಳನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತ ಕೋರಿದರು ಹಾಗೂ ಸಭೆಗೆ ಹಾಜರಿದ್ದ ಸದಸ್ಯರುಗಳನ್ನು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು.

ಮಾನ್ಯ ಕುಲಪತಿಗಳು ಮಾತನಾಡಿ, ವಿಷಯಸೂಚಿ ಪ್ರಕಾರ 174ನೇ ಸಾಮಾನ್ಯ ಸಭೆಗೆ ಮಂಡಿಸಿದ್ದ ವಿಷಯಗಳನ್ನು ಪ್ರಸ್ತಾಪಿಸಲು ಕುಲಸಚಿವರಿಗೆ ಸೂಚಿಸಿದರು. ನಂತರ, ಕುಲಸಚಿವರು 174ನೇ ವ್ಯವಸ್ಥಾಪನಾ ಮಂಡಳಿಯ ಸಾಮಾನ್ಯ ಸಭೆಗೆ ಮಂಡಿಸಿದ್ದ ವಿಷಯಗಳನ್ನು ಪ್ರಸ್ತಾಪಿಸಿದರು.

ಕುಲಪತಿಗಳು

ಕುಲಸಚಿವರು

ವಿಷಯ ಸಂಖ್ಯೆ: 174.01

ಅ) ದಿನಾಂಕ: 27.07.2023ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 173ನೇ ಸಾಮಾನ್ಯ ಸಭೆಯ ನಡವಳಿಯನ್ನು ಸ್ಥಿರೀಕರಿಸುವ ಬಗ್ಗೆ.

ಆ) ದಿನಾಂಕ: 27.07.2023ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 173ನೇ ಸಾಮಾನ್ಯ ಸಭೆಯ ತೀರ್ಮಾನಗಳ ಬಗ್ಗೆ ಕೈಗೊಂಡ ಕ್ರಮದ ವರದಿ ಬಗ್ಗೆ.

– * –

ಶ್ರೀಮತಿ. ಉಮಾ .ಕೆ, ಜಂಟಿ ಕಾರ್ಯದರ್ಶಿ, ಹಣಕಾಸು ಇಲಾಖೆ ರವರು ಮಾತನಾಡಿ 371(J) ಪ್ರಕಾರ ದಿನಾಂಕ: 24–11–2021ರ ಸರ್ಕಾರದ ಸುತ್ತೋಲೆಗಳ ಪ್ರಕಾರ ಗ್ರೂಪ್ "ಸಿ ಮತ್ತು ಡಿ" ಗಳನ್ನು ಹೊರ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಬೇಕೆಂದು ಇದ್ದು, ಅದರಂತೆ ಕ್ರಮವಹಿಸಲು ತಿಳಿಸಿದರು.

ಸದಸ್ಯರಾದ ಶ್ರೀ. ಬಿ.ಜಿ.ಪಾಟೀಲ್ ರವರು ಮಾತನಾಡಿ ಹೈದ್ರಾಬಾದ್–ಕರ್ನಾಟಕ ಪ್ರದೇಶವಾರು ಬಹಳ ಹಿಂದುಳಿದ ಪ್ರದೇಶವಾಗಿರುವುದರಿಂದ ಆ ಪ್ರದೇಶದವರಿಗೆ ಸರ್ಕಾರದ ಮೀಸಲಾತಿಯನ್ನು ಪರಿಗಣಿಸಬೇಕೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಈಗ ನಾವು ನೀಡಿರತಕ್ಕ ಹೈದ್ರಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಬೆಳವಣಿಗೆ ದೃಷ್ಟಿಯಿಂದ ಅಭಿವೃದ್ಧಿಪಡಿಸಲು 371(J) ಪ್ರಕಾರ ಶೇ.8ರಷ್ಟು ಮೀಸಲಾತಿ ನಿಯಮ ಇರುವುದರಿಂದ ಈಗಾಗಲೇ ಸರ್ಕಾರದಿಂದ ಅನುಮೋದನೆಗೊಂಡು ಬಂದಿರತಕ್ಕ ಹುದ್ದೆಗಳ ಪ್ರಕಾರ ಆ ಪ್ರದೇಶದವರಿಗೆ ಇರುವ ಮೀಸಲಾತಿ ವಿ.ವಿ.ಯು ಅಧಿಸೂಚನೆಯನ್ನು ಹೊರಡಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ತೀರ್ಮಾನ:

ಅ) ದಿನಾಂಕ: 27.07.2023ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 173ನೇ ಸಾಮಾನ್ಯ ಸಭೆಯ ನಡವಳಿಯನ್ನು ಈ ಮೇಲ್ಕಂಡ ವಿವರಗಳೊಂದಿಗೆ ಸ್ಥಿರೀಕರಿಸಲಾಯಿತು.

ಆ) ದಿನಾಂಕ: 27.07.2023ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 173ನೇ ಸಾಮಾನ್ಯ ಸಭೆಯ ತೀರ್ಮಾನಗಳ ಬಗ್ಗೆ ಕೈಗೊಂಡ ಕ್ರಮದ ವರದಿಯನ್ನು ಅನುಮೋದಿಸಲಾಯಿತು.

#####

ವಿಷಯ ಸಂಖ್ಯೆ: 174.02

ವಿಷಯ: ಕರಾಮುವಿಯ ಕಲಿಕಾರ್ಥಿ ಸಹಾಯ ಕೇಂದ್ರಗಳು ಪ್ರತಿ ಶೈಕ್ಷಣಿಕ ವರ್ಷಗಳಲ್ಲಿ ಸಂಯೋಜನೆಯನ್ನು ನವೀಕರಿಸುವ ಬಗೆಗೆ.

– * –

ಮುಕ್ತ ಮತ್ತು ದೂರ ಶಿಕ್ಷಣ ವ್ಯವಸ್ಥೆಯನ್ನು ಹೊಂದಿರುವ ನಮ್ಮ ವಿಶ್ವವಿದ್ಯಾನಿಲಯವು ಯು.ಜಿ.ಸಿ ಯ "ಮುಕ್ತ ಮತ್ತು ದೂರ ಶಿಕ್ಷಣ ಕಲಿಕೆ" ಯ ನಿಯಮಾವಳಿ – 2020ರ ಪ್ರಕಾರ, **'ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ'** ಎಂಬ ಧ್ಯೇಯ ವಾಕ್ಯದ ಅನುಸಾರ ಶಿಕ್ಷಣವನ್ನು ಕಲಿಕಾರ್ಥಿ ಸಹಾಯ ಕೇಂದ್ರಗಳ ಮೂಲಕ ನೀಡುತ್ತಾ ಬಂದಿರುತ್ತದೆ. ಈ ಸಂಬಂಧ 2023–24ನೇ ಸಾಲಿನ ಜುಲೈ ಆವೃತ್ತಿಯವರೆಗೆ ಸ್ಥಾಪಿಸಲಾಗಿರುವ ಒಟ್ಟು 178 ಕಲಿಕಾರ್ಥಿ ಸಹಾಯ ಕೇಂದ್ರಗಳು ಸಾಮಾನ್ಯ ವಿಶ್ವವಿದ್ಯಾನಿಲಯಗಳಲ್ಲಿ ಹೇಗೆ ಸಂಯೋಜನೆಯನ್ನು ನವೀಕರಿಸುತ್ತವೆಯೋ ಅದೇ ಪ್ರಕಾರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪ್ರತಿ ಶೈಕ್ಷಣಿಕ ಸಾಲಿನಲ್ಲಿ ರೂ10,000/–(ಹತ್ತು ಸಾವಿರ ರೂ)ಗಳನ್ನು ವಿಶ್ವವಿದ್ಯಾನಿಲಯದ ಖಾತೆಗೆ ಪಾವತಿಸಿ ಸಂಯೋಜನೆಯ ದೃಢೀಕೃತ ಪ್ರತಿಯನ್ನು ಸಲ್ಲಿಸಿ ಕಲಿಕಾರ್ಥಿ ಸಹಾಯ ಕೇಂದ್ರವನ್ನು ನವೀಕರಿಸಿಕೊಳ್ಳುಲು ಹಾಗೂ ಹಣ ಸಂದಾಯ ಮಾಡಿರುವ ಮತ್ತು ಇತರೆ ದಾಖಲಾತಿಗಳನ್ನು ಸಲ್ಲಿಸುವ ಪ್ರಸ್ತಾವನೆಗೆ ಅನುಮೋದನೆ ಪಡೆಯುವ ಸಂಬಂಧದ ವಿಷಯವನ್ನು ಚರ್ಚೆ ಮತ್ತು ನಿರ್ಣಯಕ್ಕಾಗಿ ವ್ಯವಸ್ಥಾಪನಾ ಮಂಡಳಿಯ ಅನುಮೋದನೆಗಾಗಿ ಮಂಡಿಸಿದೆ.

*****

ಕುಲಪತಿಗಳು

ಕುಲಸಚಿವರು

ಕುಲಸಚಿವರು ಮಾತನಾಡಿ ಕರಾಮುವಿಯ ಕಲಿಕಾರ್ಥಿ ಸಹಾಯ ಕೇಂದ್ರಗಳ ನೋಂದಣಿ ಸಂದರ್ಭದಲ್ಲಿ ಕಲಿಕಾ ಕೇಂದ್ರ ಪಡೆಯುತ್ತಿರುವ ಸಂಸ್ಥೆಯ ಮೂಲಸೌಕರ್ಯಗಳ ಪರಿಶೀಲನೆ ಸಂಬಂಧ ಒಂದು ತಂಡವನ್ನು ರಚಿಸಿ, ಸದರಿ ತಂಡದವರು ನೀಡುವ ವರದಿ ಆಧಾರದ ಮೇಲೆ ಆ ಸ್ಥಳದ ಅವಶ್ಯಕತೆಯನ್ನು ಗಮನಿಸಿ ಆ ಸ್ಥಳದಲ್ಲಿ ಕಲಿಕಾರ್ಥಿ ಸಹಾಯ ಕೇಂದ್ರವನ್ನು ತೆರೆಯಲು ಮುಂಗಡ ಹಣ ಪಡೆದು ಒಡಂಬಡಿಕೆ ಮಾಡಿಕೊಂಡು ನಂತರ ಆದೇಶ ನೀಡಲಾಗುವುದೆಂದು ಸಭೆಯ ಗಮನಕ್ಕೆ ತಂದರು.

ಶ್ರೀಮತಿ. ಉಮಾ .ಕೆ, ಜಂಟಿ ಕಾರ್ಯದರ್ಶಿ, ಹಣಕಾಸು ಇಲಾಖೆ ರವರು ಮಾತನಾಡಿ ಈ ರೀತಿ ಕಲಿಕಾ ಕೇಂದ್ರಗಳನ್ನು ತೆರೆಯುತ್ತಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಉಪಯೋಗವಾಗುತ್ತಿರುವುದರ ಬಗ್ಗೆ ಚರ್ಚಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಕರ್ನಾಟಕದಾದ್ಯಂತ ಸುಮಾರು 178 ಕಲಿಕಾರ್ಥಿ ಸಹಾಯ ಕೇಂದ್ರಗಳಿದ್ದು, ಆ ಕೇಂದ್ರಗಳ ಮುಖಾಂತರ ವಿಶ್ವವಿದ್ಯಾನಿಲಯಕ್ಕೆ ಹೆಚ್ಚಿನ ಪ್ರವೇಶಾತಿಗೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ತೆರೆಯಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

ಸಾಂಪ್ರದಾಯಿಕ ವಿಶ್ವವಿದ್ಯಾನಿಲಯಗಳಲ್ಲಿ ಹೇಗೆ ಸಂಯೋಜನೆಯನ್ನು ನವೀಕರಿಸುತ್ತಾರೆಯೋ ಅದೇ ರೀತಿ ಮಾಡಲಾಗುತ್ತಿದೆಯೇ ಎಂದು ಸದಸ್ಯರಾದ ಶ್ರೀ.ಕೆ.ಹರೀಶ್‌ಗೌಡರು ಮತ್ತು ಶ್ರೀ.ಡಿ. ರವಿಶಂಕರ್‌ರವರು ಕೇಳಿದರು.

ಕುಲಸಚಿವರು ಮಾತನಾಡಿ ಕರಾಮುವಿಯ ಕಲಿಕಾರ್ಥಿ ಸಹಾಯ ಕೇಂದ್ರಗಳ ಪ್ರತಿ ಶೈಕ್ಷಣಿಕ ಸಾಲಿನಲ್ಲಿ ನವೀಕರಣ ಮಾಡುವುದರಿಂದ ಆ ಕಲಿಕಾರ್ಥಿ ಸಹಾಯ ಕೇಂದ್ರಗಳ ನಿರ್ವಹಣೆ ಸಮಂಜಸವಾಗಿರುತ್ತದೆ. ಈ ಸಂಬಂಧ ನವೀಕರಣಕ್ಕೆ ಶುಲ್ಕ ರೂ.10,000/- (ಹತ್ತು ಸಾವಿರ ರೂ)ಗಳನ್ನು ಪಡೆಯುತ್ತಿದ್ದು, ಸದರಿ ಶುಲ್ಕವು Non-refundable ಆಗಿರುತ್ತದೆ. ಇದು ವಿ.ವಿ. ನಿಲಯಕ್ಕೆ ಅನುಕೂಲವಾಗುತ್ತದೆ ಎಂದು ತಿಳಿಸಿದರು.

ತೀರ್ಮಾನ:

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಕರಾಮುವಿ ಕಲಿಕಾರ್ಥಿ ಸಹಾಯ ಕೇಂದ್ರಗಳ ಮೂಲಕ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ನೀಡುತ್ತಾ ಬಂದಿದ್ದು, ಈ ಸಂಬಂಧ ಈಗಾಗಲೇ ಸಾಮಾನ್ಯ ವಿಶ್ವವಿದ್ಯಾನಿಲಯಗಳಲ್ಲಿ ಸಂಯೋಜನೆಯನ್ನು ನವೀಕರಿಸುವ ಮಾದರಿಯಲ್ಲಿ ನವೀಕರಿಸುವ ಸಂಬಂಧ ಒಟ್ಟು 178 ಕಲಿಕಾರ್ಥಿ ಸಹಾಯ ಕೇಂದ್ರಗಳಿಂದ ಪ್ರತಿ ಶೈಕ್ಷಣಿಕ ಸಾಲಿನಲ್ಲಿ ರೂ10,000/-(ಹತ್ತು ಸಾವಿರ ರೂ)ಗಳನ್ನು ವಿಶ್ವವಿದ್ಯಾನಿಲಯದ ಖಾತೆಗೆ ಪಾವತಿಸಿಕೊಂಡು ಸಂಯೋಜನೆಯ ದೃಢೀಕೃತ ಪ್ರತಿಯನ್ನು ನೀಡುವಂತೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.**

#####

**ವಿಷಯ ಸಂಖ್ಯೆ: 174.03**

**ವಿಷಯ: ದಿವಂಗತ ಶ್ರೀ ಎಸ್.ಎ. ಶಶಿಕುಮಾರ್, ಸಹಾಯಕ ಅಭಿಯಂತರರು (ಎಲೆಕ್ಟ್ರಿಕಲ್) ಇವರ ವೈದ್ಯಕೀಯ ಮರುಭರಿಕೆ ಹುಂಡಿ ಪಾವತಿಸುವ ಕುರಿತು.**

– * –

ದಿವಂಗತ ಶ್ರೀ ಎಸ್.ಎ. ಶಶಿಕುಮಾರ್, ಸಹಾಯಕ ಅಭಿಯಂತರರು (ಎಲೆಕ್ಟ್ರಿಕಲ್) ಇಂಜಿನಿಯರ್, ಕರಾಮುವಿ, ಮೈಸೂರು, ಇವರು ಅನಾರೋಗ್ಯಕ್ಕೆ ತುತ್ತಾಗಿ ಜೆ.ಎಸ್.ಎಸ್. ಆಸ್ಪತ್ರೆ, ಮೈಸೂರು ಇಲ್ಲಿ ಒಳರೋಗಿಯಾಗಿ ದಾಖಲಾಗಿ ನಂತರ ಶಸ್ತ್ರ ಚಿಕಿತ್ಸೆಗೆ ಒಳಗಾಗಿ ಕಿಡ್ನಿ ವೈಫಲ್ಯದಿಂದ ದಿನಾಂಕ: 20-01-2023 ರಂದು ನಿಧನ ಹೊಂದಿರುತ್ತಾರೆ. ಇವರ ಪತ್ನಿ ಶ್ರೀಮತಿ. ಶಶಿರೇಖಾ ಇವರು ಸಲ್ಲಿಸಿದ ವೈದ್ಯಕೀಯ ವೆಚ್ಚ ಮರುಭರಿಕೆಯ ಹುಂಡಿಯ ಒಟ್ಟು ಮೊತ್ತ ರೂ.2,59,855/-(ಎರಡು ಲಕ್ಷದ ಐವತ್ತೊಂಬತ್ತು ಸಾವಿರದ ಎಂಟನೂರ ಐವತ್ತೈದು ರೂಪಾಯಿಗಳು ಮಾತ್ರ) ಗಳನ್ನು ಪಾವತಿಸುವ ಸಂಬಂಧ ದಿನಾಂಕ: 13-06-2023 ರಂದು ನಡೆದ 172ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಪುನರ್ ಪರಿಶೀಲಿಸಿ ಮುಂದಿನ ಕ್ರಮಕೈಗೊಳ್ಳುವಂತೆ ಸರ್ವಾನುಮತದಿಂದ ಒಪ್ಪಿಗೆ ನೀಡಿರುವ ಮೇರೆಗೆ ಹಾಗೂ ಮಾನ್ಯ ಕುಲಪತಿಗಳು ಹುಂಡಿ ಪಾವತಿಗೆ ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಸದರಿಯವರಿಗೆ ಹುಂಡಿಯ ಮೊತ್ತವನ್ನು ಪಾವತಿಗಾಗಿ ಹಣಕಾಸು ವಿಭಾಗಕ್ಕೆ ಸಲ್ಲಿಸಿರುವ ವಿಷಯವನ್ನು ತಮ್ಮ ಅವಗಾಹನೆಗೆ ತರಬಯಸುತ್ತೇನೆ.

ಕುಲಪತಿಗಳು ಕುಲಸಚಿವರು

ಮುಂದುವರೆದು, ದಿವಂಗತ ಶ್ರೀ ಎಸ್.ಎ.ಶಶಿಕುಮಾರ್, ಸಹಾಯಕ ಅಭಿಯಂತರರು (ಎಲೆಕ್ಟ್ರಿಕಲ್) ಇಂಜಿನಿಯರ್, ಕರಾಮುವಿ, ಮೈಸೂರು, ಇವರ ಪತ್ನಿಯಾದ ಶ್ರೀಮತಿ. ಶಶಿರೇಖಾ ಡಿ. ಇವರು ಪತಿಯ ವೈದ್ಯಕೀಯ ವೆಚ್ಚದ ಮರುಭರಿಕೆ ಹುಂಡಿಯ ವೆಚ್ಚ ರೂ. 1,01,871/-(ಒಂದು ಲಕ್ಷದ ಒಂದು ಸಾವಿರದ ಎಂಟನ್ನೂರ ಎಪ್ಪತ್ತೊಂದು ರೂಪಾಯಿಗಳು ಮಾತ್ರ)ಗಳನ್ನು ನನ್ನ ಹೆಸರಿಗೆ ಪಾವತಿಸುವಂತೆ ಪತ್ರದ ಮೂಲಕ ಮನವಿ ಮಾಡಿಕೊಂಡಿರುತ್ತಾರೆ.

ಸದರಿಯವರು ಸಲ್ಲಿಸಿದ ಹುಂಡಿಗಳನ್ನು KMAR ನಿಯಮ 1963ರ ಪ್ರಕಾರ CGHS ಬೆಂಗಳೂರು ದರಗಳ ಅನ್ವಯ ಪರಿಶೀಲಿಸಿದ ನಂತರ ಪಾವತಿಸಬೇಕಾಗಿರುವ ಹುಂಡಿಯ ಒಟ್ಟು ಮೊತ್ತ ರೂ. 87,069/-(ಎಂಬತ್ತೇಳು ಸಾವಿರದ ಅರವತ್ತೊಂಬತ್ತು ರೂಪಾಯಿಗಳು ಮಾತ್ರ)ಗಳಾಗಿರುತ್ತದೆ.

ಮುಂದುವರೆದು, ವಿ.ವಿ. ನಿಲಯದ ಪರಿನಿಯಮ 23(3)ರಲ್ಲಿ ವೈದ್ಯಕೀಯ ಮರುಭರಿಕೆ ವೆಚ್ಚವು ಪ್ರತಿ ನೌಕರನಿಗೆ ಒಂದು ಆರ್ಥಿಕ ವರ್ಷದಲ್ಲಿ ರೂ. 1 ಲಕ್ಷ ಮೀರಬಾರದು ಎಂದಿರುತ್ತದೆ. ಹಾಗೆಯೇ, 23(5)ರಲ್ಲಿ ಒಂದು ಆರ್ಥಿಕ ವರ್ಷದಲ್ಲಿ ವೈದ್ಯಕೀಯ ವೆಚ್ಚವು ರೂ. 1 ಲಕ್ಷ ಮೀರಿದ ಸಂದರ್ಭದಲ್ಲಿ ಮಾನ್ಯ ಕುಲಪತಿಗಳ ತೀರ್ಮಾನವನ್ನಾಧರಿಸಿ ಪ್ರಸ್ತಾವನೆಯನ್ನು ವ್ಯವಸ್ಥಾಪನಾ ಮಂಡಳಿ ಸಭೆಗೆ ಮಂಡಿಸಬಹುದು ಎಂದಿರುತ್ತದೆ. (ಪ್ರತಿ ಲಗತ್ತಿಸಿದೆ).

ವೈದ್ಯಕೀಯ ಮರುಭರಿಕೆಗೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರ ಹೊರಡಿಸಿರುವ ಸರ್ಕಾರಿ ಆದೇಶ ಸಂಖ್ಯೆ: ಆಇ 01 ಟಿಎಫ್‌ಸಿ 2012, ಬೆಂಗಳೂರು, ದಿನಾಂಕ: 23-07-2012ರಲ್ಲಿ ಸರ್ಕಾರಿ ನೌಕರರು ವೈದ್ಯಕೀಯ ವೆಚ್ಚಗಳ ಮರು ಪಾವತಿ ಕೋರಿ ಸಲ್ಲಿಸಿರುವ ಅಂತಿಮ ಕ್ಲೇಮುಗಳನ್ನು ಸಂಬಂಧಪಟ್ಟ ಅಧಿಕೃತ ವೈದ್ಯೋಪಚಾರನು ಕೊನೆಯ ಅಗತ್ಯತಾ ಪ್ರಮಾಣ ಪತ್ರದಲ್ಲಿ ತೋರಿಸಿರುವಂತೆ ಚಿಕಿತ್ಸೆಯು ಪೂರ್ಣಗೊಂಡ ದಿನಾಂಕದಿಂದ 03 ತಿಂಗಳ ಕಾಲಮಿತಿಯ ಬದಲಾಗಿ 06 ತಿಂಗಳೊಳಗಾಗಿ ನಿಯಂತ್ರಣಾಧಿಕಾರಿಗಳಿಗೆ ಸಲ್ಲಿಸಲು ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇಧ 146(ii)ರ ನಿಯಮಗಳನ್ನು ಸಡಿಲಿಸಿ ಅನುಮತಿ ನೀಡಲಾಗಿದೆ.

ಆದರೆ ಸದರಿಯವರು 06 ತಿಂಗಳೊಳಗಾಗಿ ವಿಶ್ವವಿದ್ಯಾನಿಲಯಕ್ಕೆ ವೈದ್ಯಕೀಯ ವೆಚ್ಚ ಮರುಭರಿಕೆಯ ಅರ್ಜಿಯನ್ನು ಸಲ್ಲಿಸದೇ ಅವಧಿ ಮುಗಿದ ನಂತರ ಅಂದರೆ 06 ತಿಂಗಳ ನಂತರ ವೈದ್ಯಕೀಯ ವೆಚ್ಚ ಮರುಭರಿಕೆ ಹುಂಡಿಯನ್ನು ಸಲ್ಲಿಸಿರುತ್ತಾರೆ. ವಿಷಯವನ್ನು ತಮ್ಮ ಅವಗಾಹನೆಗೆ ತರಲಾಗಿದೆ.

ಮೇಲಿನ ಎಲ್ಲಾ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಸದರಿಯವರು ಸಲ್ಲಿಸಿರುವ ವೈದ್ಯಕೀಯ ವೆಚ್ಚದ ಮರುಭರಿಕೆ ಹುಂಡಿಯ ಮೊತ್ತ ರೂ.87,069/-(ಎಂಬತ್ತೇಳು ಸಾವಿರದ ಅರವತ್ತೊಂಬತ್ತು ರೂಪಾಯಿಗಳು ಮಾತ್ರ)ಗಳನ್ನು ಪಾವತಿಸುವ ಬಗ್ಗೆ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

*****

ಸದರಿ ವಿಷಯದ ಬಗ್ಗೆ ಮಾನ್ಯ ಕುಲಪತಿಗಳು ಮಾತನಾಡಿ, ಸದರಿ ಸಿಬ್ಬಂದಿಗೆ ವಿ.ವಿ.ನಿಲಯವು ಈಗಾಗಲೇ 2 ಲಕ್ಷ ರೂಪಾಯಿಗಳವರೆಗೆ ವೈದ್ಯಕೀಯ ವೆಚ್ಚವನ್ನು ಭರಿಸಿದ್ದು, ನಂತರದ ದಿನಗಳಲ್ಲಿ ಬಂದಂತಹ ವೈದ್ಯಕೀಯ ಮರುಭರಿಕೆ ಹುಂಡಿ ಮೊತ್ತ ರೂ.87,069/-ಗಳನ್ನು ಪಾವತಿಸುವ ಸಂಬಂಧ ಮನವಿ ಸಲ್ಲಿಸಿರುತ್ತಾರೆಂದು ತಿಳಿಸಿದರು.

ಜಂಟಿ ಕಾರ್ಯದರ್ಶಿ, ಹಣಕಾಸು ಇಲಾಖೆ ಇವರು ಮಾತನಾಡಿ ಸರ್ಕಾರಿ ಆದೇಶ ಸಂಖ್ಯೆ ಆಇ 01 ಟಿಎಫ್‌ಸಿ 2012, ಬೆಂಗಳೂರು, ದಿನಾಂಕ: 23-07-2012ರಲ್ಲಿ ಚಿಕಿತ್ಸೆಯು ಪೂರ್ಣಗೊಂಡ ದಿನಾಂಕದಿಂದ 3 ತಿಂಗಳ ಕಾಲಮಿತಿ ಬದಲಾಗಿ 6 ತಿಂಗಳೊಳಗೆ ನಿಯಂತ್ರಣಾಧಿಕಾರಿಗಳಿಗೆ ಸಲ್ಲಿಸಲು ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 146 (ii)ರ ನಿಯಮಗಳನ್ನು ಸಡಿಲಿಸಿ ಅನುಮತಿ ನೀಡಲಾಗಿದೆ. ಸದರಿಯವರು ಅವಧಿ ಮೀರಿ ಹುಂಡಿಯನ್ನು ಸಲ್ಲಿಸಿರುತ್ತಾರೆ ಇದನ್ನು ಯಾವ ರೀತಿ ಪರಿಗಣಿಸುತ್ತೀರೆಂದು ಕೇಳಿದರು.

ಶ್ರೀ.ಕೆ. ಹರೀಶ್‌ಗೌಡರು ಮಾತನಾಡಿ ಈಗಾಗಲೇ ಸದರಿ ನೌಕರರು ಮರಣ ಹೊಂದಿದ್ದು, ಮಾನವೀಯತೆ ದೃಷ್ಟಿಯಿಂದ ಇದನ್ನು ಪರಿಗಣಿಸಬೇಕಾಗುತ್ತದೆಂದು ತಿಳಿಸಿದರು.

ಕುಲಪತಿಗಳು

ಕುಲಸಚಿವರು

ಜಂಟಿ ಕಾರ್ಯದರ್ಶಿ, ಹಣಕಾಸು ಇಲಾಖೆ ರವರು ಮಾತನಾಡಿ ಸರ್ಕಾರದ ನಿಯಮಾವಳಿಗಳ ರೀತ್ಯಾ ಮುಂದಿನ ಕ್ರಮವಹಿಸಲು ತಿಳಿಸಿದರು.

ತೀರ್ಮಾನ:

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು,** ದಿವಂಗತ ಶ್ರೀ ಎಸ್.ಎ.ಶಶಿಕುಮಾರ್, ಸಹಾಯಕ ಅಭಿಯಂತರರು (ಎಲೆಕ್ಟ್ರಿಕಲ್) ಕರಾಮುವಿ ಇವರ ವೈದ್ಯಕೀಯ ಮರುಭರಿಕೆ ಹುಂಡಿ ಮೊತ್ತ ರೂ.87,069/–ಗಳನ್ನು ಮಾನವೀಯ ದೃಷ್ಟಿಯಿಂದ ಪಾವತಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

#####

**ವಿಷಯ ಸಂಖ್ಯೆ: 174.04**

**ವಿಷಯ: ವಿಶೇಷ (29ನೇ ವಿಶೇಷ) ಶೈಕ್ಷಣಿಕ ಮಂಡಳಿ ಸಭೆಯ ನಡಾವಳಿಯನ್ನು ಅನುಮೋದಿಸುವ ಕುರಿತು.**

– * –

ದಿನಾಂಕ: 09–08–2023ರಂದು ನಡೆದ 29ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡಾವಳಿಯನ್ನು ದಿನಾಂಕ: 15–09–2023ರಂದು ನಡೆಯಲಿರುವ ವ್ಯವಸ್ಥಾಪನಾ ಮಂಡಳಿಯ 174ನೇ ಸಾಮಾನ್ಯ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

*****

ಸದರಿ ವಿಷಯದ ಬಗ್ಗೆ ಮಾನ್ಯ ಕುಲಪತಿಗಳು ಮಾತನಾಡಿ, ಕರಾಮುವಿಗೆ ಕಾರ್ಯಕ್ರಮಗಳ ಅನುಮೋದನೆ ಸಂಬಂಧ ಪ್ರಥಮ ಬಾರಿಗೆ ನ್ಯಾಕ್ ಸಮಿತಿಯು ಭೇಟಿ ನೀಡಿದ್ದು, ನ್ಯಾಕ್ ಗ್ರೇಡ್ ಆಧಾರದ ಮೇಲೆ ಕರಾಮುವಿ ಕಾರ್ಯಕ್ರಮಗಳಿಗೆ ಯುಜಿಸಿ ಕೋಸ್ ್ಗಳನ್ನು ನಡೆಸಲು ಅನುಮೋದನೆ ನೀಡುತ್ತದೆಂದು ತಿಳಿಸಿದ್ದು. ಅದರಂತೆ, ನ್ಯಾಕ್ ಕೋರಿರುವ ಮಾಹಿತಿಯನ್ನು ಚಾಚು ತಪ್ಪದೇ ಪಾಲನೇ ಮಾಡಿ ಸೂಚಿಸಿದ್ದ ಕೊನೆಯ ದಿನಾಂಕ ಮಧ್ಯರಾತ್ರಿವರೆಗೂ ಇದ್ದು, ಅವುಗಳನ್ನು ನ್ಯಾಕ್ ರವರು ನೀಡಿರತಕ್ಕ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿ, ನ್ಯಾಕ್ ಸಮಿತಿಯವರು ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಚರ್ಚೆ / ಮಾಹಿತಿ / ವಿವರಗಳು ಮತ್ತು ಕ್ಯಾಂಪಸ್ ವೀಕ್ಷಣೆ ಮಾಡಿ ನಂತರ ನಮ್ಮ ವಿಶ್ವವಿದ್ಯಾನಿಲಯ A+ ಗ್ರೇಡ್ ಪಡೆಯಲು ಸಾಧ್ಯವಾಗಿರುತ್ತದೆಂದು ಸಭೆಯ ಗಮನಕ್ಕೆ ತಂದರು.

ನಮ್ಮ ವಿಶ್ವವಿದ್ಯಾನಿಲಯಕ್ಕೆ ನ್ಯಾಕ್‌ನಿಂದ A + ಗ್ರೇಡ್ ಪಡೆದ ನಂತರ ಯುಜಿಸಿಯು 43 ಕೋರ್ಸ್‌ಗಳಿಗೆ ಹಾಗೂ 10 ಆನ್‌ಲೈನ್ ಕಾರ್ಯಕ್ರಮಗಳಿಗೆ ಅನುಮೋದನೆ ನೀಡಿರುತ್ತದೆ ತಿಳಿಸಿದರು. ಈ 10 ಆನ್‌ಲೈನ್ ಕಾರ್ಯಕ್ರಮಗಳಿಗೆ ಸಿಲಬಸ್‌ಗಳನ್ನು ಸಿದ್ಧಪಡಿಸಿ, ನಂತರ ಇವುಗಳಿಗೆ ಸಿದ್ಧಪಾಠಗಳನ್ನೂ ಸಹ ಸಿದ್ಧಪಡಿಸಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

*****

ತೀರ್ಮಾನ:

**ದಿನಾಂಕ: 09.08.2023ರಂದು ನಡೆದ 29ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡಾವಳಿಯನ್ನು ದಿನಾಂಕ: 15.09.2023ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 174ನೇ ಸಾಮಾನ್ಯ ಸಭೆಯಲ್ಲಿ ಅನುಮೋದಿಸಿತು.**

#####

ಕುಲಪತಿಗಳು ಕುಲಸಚಿವರು

ವಿಷಯ ಸಂಖ್ಯೆ: 174.05

**ವಿಷಯ: ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಧ್ಯಾಪಕರುಗಳಿಂದ ವೃತ್ತಿ ಪದೋನ್ನತಿ ಯೋಜನೆಯಡಿ ಹಿರಿಯ ಶ್ರೇಣಿ ಪ್ರಾಧ್ಯಾಪಕ ಹುದ್ದೆಗೆ ಅರ್ಜಿಗಳನ್ನು ಆಹ್ವಾನಿಸುವ ಬಗೆಗೆ.**

– * –

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರೊ. ಲಕ್ಷ್ಮಿ ಎನ್, ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ ಇವರು ಹಿರಿಯ ಶ್ರೇಣಿಯ ಪ್ರಾಧ್ಯಾಪಕ ಹುದ್ದೆಗೆ ಅರ್ಜಿಯನ್ನು ಸಲ್ಲಿಸಿದ್ದು, ಇವರುಗಳನ್ನೊಳಗೊಂಡಂತೆ ವಿಶ್ವವಿದ್ಯಾನಿಲಯದಲ್ಲಿ ಇತರೆ ಪ್ರಾಧ್ಯಾಪಕರುಗಳಿಂದ ಹಾಗೂ ತತ್ಸಮಾನ ವೃಂದದವರಿಂದ ಯುಜಿಸಿ ನಿಯಮಾನುಸಾರ ವೃತ್ತಿ ಪದೋನ್ನತಿ ಯೋಜನೆಯಡಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವ ಸಂಬಂಧ ವಿಷಯವನ್ನು ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

*****

ಸದರಿ ವಿಷಯದ ಬಗ್ಗೆ ಜಂಟಿ ಕಾರ್ಯದರ್ಶಿ, ಹಣಕಾಸು ಇಲಾಖೆ ರವರು ಮಾತನಾಡಿ ಯುಜಿಸಿ 2018ರ ನಿಯಮಾವಳಿಗಳನ್ನು ಅನುಸರಿಸುವಂತೆ ತಿಳಿಸಿದರು.

ತೀರ್ಮಾನ:

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಕರಾಮುವಿಯಲ್ಲಿ ಈಗಾಗಲೇ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಧ್ಯಾಪಕರುಗಳಿಂದ ವೃತ್ತಿ ಪದೋನ್ನತಿ ಯೋಜನೆಯಡಿ ಹಿರಿಯ ಶ್ರೇಣಿ ಪ್ರಾಧ್ಯಾಪಕ ಹುದ್ದೆಗೆ 2018ರ ಯುಜಿಸಿ ನಿಯಮಾವಳಿಗಳ ಅನುಸಾರ ಅರ್ಹತೆಗಳಿದ್ದಲ್ಲಿ ಪರಿಗಣಿಸಬಹುದೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

ವಿಷಯ ಸಂಖ್ಯೆ: 174.06

**ವಿಷಯ: ಅಧ್ಯಾಪಕ ವೃಂದದ ಪದೋನ್ನತಿ ಸಂಬಂಧ ಕುಂದು–ಕೊರತೆ ನಿವಾರಣಾ ಸಮಿತಿಯ ವರದಿಯನ್ನು ಸಲ್ಲಿಸುತ್ತಿರುವ ಬಗೆಗೆ.**

– * –

ವಿಶ್ವವಿದ್ಯಾನಿಲಯದ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರ ಹಾಗೂ ತತ್ಸಮಾನ ವೃಂದದವರಿಂದ ಯುಜಿಸಿ ನಿಯಮಾನುಸಾರ ವೃತ್ತಿ ಪದೋನ್ನತಿ ಯೋಜನೆಯಡಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ, ವಿವಿಧ ಅಧ್ಯಾಯನ ವಿಭಾಗಗಳ ಅಧ್ಯಾಪಕರುಗಳಿಗೆ ಹಾಗೂ ತತ್ಸಮಾನ ವೃಂದದವರಿಗೆ ದಿನಾಂಕ: 08.08.2023ರಂದು ಮುಂದಿನ ಹಂತದ ಪದೋನ್ನತಿ ನೀಡಿ ಆದೇಶ ಹೊರಡಿಸಲಾಗಿರುತ್ತದೆ. ಸದರಿ ಪದೋನ್ನತಿ ಸಂಬಂಧಿಸಿದಂತೆ ಯಾವುದಾದರೂ ಮನವಿಗಳಿದ್ದಲ್ಲಿ ತಮ್ಮ ಮನವಿಗಳನ್ನು ಲಿಖಿತ ರೂಪದಲ್ಲಿ ದಿನಾಂಕ: 09.09.2023ರ ಒಳಗಾಗಿ ಮನವಿಗಳನ್ನು ಕುಲಸಚಿವರಿಗೆ ಸಲ್ಲಿಸಲು ಸುತ್ತೋಲೆ ಹೊರಡಿಸಲಾಗಿರುತ್ತದೆ.

ಈ ಸಂಬಂಧವಾಗಿ ವಿವಿಧ ಅಧ್ಯಾಯನ ವಿಭಾಗಗಳ ಅಧ್ಯಾಪಕರುಗಳು ಮನವಿ ಪತ್ರಗಳನ್ನು ಕೆಳಕಂಡಂತೆ ಸಲ್ಲಿಸಿರುತ್ತಾರೆ.

1. ಡಾ. ನಿರಂಜನ್ ರಾಜ್ ಎಸ್, ಸಹಾಯಕ ಪ್ರಾಧ್ಯಾಪಕರು, ಸೂಕ್ಷ್ಮ ಜೀವಶಾಸ್ತ್ರ ಅಧ್ಯಯನ ವಿಭಾಗ, ಕರಾಮುವಿ, ಮೈಸೂರು.
2. ಡಾ. ಎನ್. ಜಿ. ರಾಜು, ಸಹಾಯಕ ಪ್ರಾಧ್ಯಾಪಕರು, ಜೈವಿಕ ತಂತ್ರಜ್ಞಾನ (Biotechnology) ಅಧ್ಯಯನ ವಿಭಾಗ, ಕರಾಮುವಿ, ಮೈಸೂರು.
3. ಡಾ. ಹೇಮಲತಾ ಎಂ. ಎಸ್. ಸಹಾಯಕ ಪ್ರಾಧ್ಯಾಪಕರು, ಆಹಾರ ಮತ್ತು ಪೌಷ್ಟಿಕಾಂಶ ಅಧ್ಯಯನ ವಿಭಾಗ, ಕರಾಮುವಿ, ಮೈಸೂರು.
4. ಡಾ. ಉಮಾಶಂಕರ ಎಂ, ಸಹಾಯಕ ಪ್ರಾಧ್ಯಾಪಕರು, ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಕರಾಮುವಿ, ಮೈಸೂರು.

**ಕುಲಪತಿಗಳು** **ಕುಲಸಚಿವರು**

5. ಡಾ. ನಟರಾಜು ಅಂಗಸ್ವಾಮಿ, ಸಹಾಯಕ ಪ್ರಾಧ್ಯಾಪಕರು, ಸೂಕ್ಷ್ಮ ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಕರಾಮುವಿ, ಮೈಸೂರು.
6. ಪ್ರೊ. ಟಿ.ಎಂ.ಗೀತಾಂಜಲಿ, ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ, ಕರಾಮುವಿ, ಮೈಸೂರು.
7. ಡಾ. ಎಂ. ಗೋಪಾಲಸ್ವಾಮಿ, ಉಪ ಗ್ರಂಥಪಾಲಕರು, ಕರಾಮುವಿ, ಮೈಸೂರು.
8. ಡಾ. ವಿ. ಶೀಲಾ, ಸಹಾಯಕ ಗ್ರಂಥಪಾಲಕರು, ಕರಾಮುವಿ, ಮೈಸೂರು.

ಸದರಿ ಮನವಿ ಪತ್ರಗಳನ್ನು ದಿನಾಂಕ: 13.09.2023 ರಂದು ನಡೆದ ಕುಂದು ಕೊರತೆಗಳ ಸಮಿತಿಗೆ ಸಲ್ಲಿಸಲಾಗಿ, ಸಮಿತಿಯು ಮನವಿ ಪತ್ರಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಸಮಿತಿಯ ವರದಿಯನ್ನು ಕುಲಸಚಿವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿರುತ್ತಾರೆ. ಸದರಿ ಲಕೋಟೆಯನ್ನು ತೆರೆದು ಸಮಿತಿಯ ವರದಿಯನ್ನು ವ್ಯವಸ್ಥಾಪನಾ ಮಂಡಳಿಯಲ್ಲಿ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಿದೆ.

*****

ಜಂಟಿ ಕಾರ್ಯದರ್ಶಿ, ಹಣಕಾಸು ಇಲಾಖೆ ರವರು ಮಾತನಾಡಿ ಸದರಿಯವರುಗಳು ನೇಮಕಗೊಂಡ ಸಂದರ್ಭದಲ್ಲಿ ಇವರುಗಳು ಅದೇ ಹುದ್ದೆಯಲ್ಲಿ ಖಾಯಂ ಸೇವೆಯನ್ನು ನಿರ್ವಹಿಸಿದ್ದರೆ ಅವುಗಳನ್ನು ಆಯ್ಕೆ ಸಂದರ್ಭದಲ್ಲಿ ಪರಿಗಣಿಸಿದ್ದರೆ ಅವುಗಳ ಅಧಾರದ ಮೇಲೆ ಯುಜಿಸಿ ನಿಯಮಾವಳಿಗಳ ಪ್ರಕಾರ ಕ್ರಮವಹಿಸಬಹುದೆಂದು ತಿಳಿಸಿದರು.

<u>ತೀರ್ಮಾನ:</u>

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಕರಾಮುವಿಯ ಅಧ್ಯಾಪಕ ವೃಂದದ ಪದೋನ್ನತಿ ಸಂಬಂಧ ಕುಂದು-ಕೊರತೆ ನಿವಾರಣಾ ಸಮಿತಿಯ ವರದಿಯ ಅನುಸಾರ ಅವರುಗಳು ಖಾಯಂ ಅಧ್ಯಾಪಕ ವೃಂದದಲ್ಲಿ ಈಗಾಗಲೇ ಬೇರೆ ವಿಶ್ವವಿದ್ಯಾನಿಲಯಗಳಲ್ಲಿ / ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಣೆ ಮಾಡಿರುವ ದಾಖಲಾತಿಗಳನ್ವಯ ಅವರುಗಳ ನೇಮಕ ಸಂದರ್ಭದಲ್ಲಿ ಇವುಗಳನ್ನು ಗಣನೆಗೆ ಪರಿಗಣಿಸಿದ್ದರೆ ಅಂತಹುಗಳನ್ನು ವೃತ್ತಿ ಪದೋನ್ನತಿ ಯೋಜನೆಯಡಿ ಅರ್ಹ ಅಭ್ಯರ್ಥಿಗಳಿಗೆ 2018ರ ಯುಜಿಸಿ ನಿಯಮಾವಳಿಗಳ ಅನುಸಾರ ಅರ್ಹತೆಗಳಿದ್ದಲ್ಲಿ ಮುಂದಿನ ಕ್ರಮವಹಿಸಬಹುದೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

**ವಿಷಯ ಸಂಖ್ಯೆ: 174.07**

**ವಿಷಯ: Sorbonne University, Paris ಹಾಗೂ European International University operations headquarters, Bangkok, Thailand, ಇವರುಗಳೊಂದಿಗೆ ಶೈಕ್ಷಣಿಕ ಒಡಂಬಡಿಕೆ ಮಾಡಿಕೊಂಡಿರುವ ಬಗೆಗೆ.**

– * –

Sorbonne University, Paris ಹಾಗೂ European International University operations headquarters, Bangkok, Thailand, ಇವರುಗಳೊಂದಿಗೆ ಶೈಕ್ಷಣಿಕ ಒಡಂಬಡಿಕೆಗಳು ಹಾಗೂ ಇನ್ನಿತರೆ ವಿಷಯಗಳ ಬಗ್ಗೆ ಚರ್ಚಿಸಲು ಕ್ರಮವಾಗಿ ದಿನಾಂಕ: 22-09-2023 ರಿಂದ 25-08-2023 ರವರೆಗೆ ಮಾನ್ಯ ಕುಲಪತಿಗಳು ಹಾಗೂ CIQA ನಿರ್ದೇಶಕರು ಹಾಗೆಯೇ ದಿನಾಂಕ 26-08-2023 ರಿಂದ 28-08-2023ರವರೆಗೆ ಮಾನ್ಯ ಕುಲಪತಿಗಳು, ಕುಲಸಚಿವರು, ಹಣಕಾಸು ಅಧಿಕಾರಿಗಳು ಹಾಗೂ CIQA ನಿರ್ದೇಶಕರು ತೆರಳಿದ್ದು, ಈ ಸಂದರ್ಭದಲ್ಲಿ KSOU ಹಾಗೂ EIU-Paris ವಿಶ್ವವಿದ್ಯಾನಿಲಯಗಳು "Foster Educational exchange and cooperation for the advancement of teaching and learning" ವಿಷಯಗಳಿಗೆ ಸಂಬಂಧಪಟ್ಟಂತೆ ಮಾಡಿಕೊಂಡಿರುವ ಒಡಂಬಡಿಕೆ ಹಾಗೂ ಅವುಗಳ ವರದಿಯನ್ನು ವ್ಯವಸ್ಥಾಪನಾ ಮಂಡಳಿ ಸಭೆಯ ಅವಗಾಹನೆಗೆ ತರುತ್ತಾ, ಮತ್ತು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

*****

**ಕುಲಪತಿಗಳು** **ಕುಲಸಚಿವರು**

ಈ ಮೇಲ್ಕಂಡ ವಿಷಯದ ಬಗ್ಗೆ ಮಾನ್ಯ ಕುಲಪತಿಗಳು ಪೂರ್ಣವಾಗಿ ಸಭೆಗೆ ವಿವರಿಸಿದರು.

ತೀರ್ಮಾನ:

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಈಗಾಗಲೇ ಮಾನ್ಯ ಕುಲಪತಿಗಳು, ಕುಲಸಚಿವರು, ಹಣಕಾಸು ಅಧಿಕಾರಿಗಳು ಹಾಗೂ CIQA ನಿರ್ದೇಶಕರುಗಳು ಹೊರ ದೇಶ ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿ ಶೈಕ್ಷಣಿಕ ವಿಷಯದ ಬಗ್ಗೆ ಚರ್ಚಿಸಿ, KSOU ಹಾಗೂ EIU-Paris ವಿಶ್ವವಿದ್ಯಾನಿಲಯಗಳು "Foster Educational exchange and cooperation for the advancement of teaching and learning" ವಿಷಯಗಳಿಗೆ ಸಂಬಂಧಪಟ್ಟಂತೆ ಮಾಡಿಕೊಂಡಿರುವ ಒಡಂಬಡಿಕೆ ಹಾಗೂ ಅವುಗಳ ವರದಿಯನ್ನು ಅನುಮೋದಿಸಲಾಯಿತು.**

#####

**ವಿಷಯ ಸಂಖ್ಯೆ: 174.08**

**ವಿಷಯ: ಶ್ರೀ ಬಿ.ಜಿ ವಿರುಪಾಕ್ಷಯ್ಯ, ಸಹಾಯಕ ಕುಲಸಚಿವ, ಸಾಮಾನ್ಯ ವಿಭಾಗ, ಕರಾಮುವಿ, ಇವರ ಮೇಲೆ ಮಾಡಲಾದ ಆರೋಪವನ್ನು ರದ್ದುಪಡಿಸುವ ಬಗೆಗೆ.**

– * –

ಶ್ರೀ ಬಿ.ಜಿ ವಿರುಪಾಕ್ಷಯ್ಯ, ಸಹಾಯಕ ಕುಲಸಚಿವ, ಸಾಮಾನ್ಯ ವಿಭಾಗ, ಕರಾಮುವಿ, ಇವರು ದಿನಾಂಕ: 13.03.2023ರ ಪತ್ರದ ಮೂಲಕ ಇವರಿಗೆ 'ಕರಾಮುವಿ ನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿವಿ ನಿಲಯದ ಉದ್ಯೋಗಿಗಳ (ಸಿಸಿಎ) ಪರಿನಿಯಮದ ನಿಯಮ 09 ಮತ್ತು 10 ರಂತೆ ದಿನಾಂಕ: 02.04.2019 **'ಷೋಕಾಸ್ ನೋಟಿಸ್'** ಜಾರಿ ಮಾಡಲಾಗಿದ್ದು, ಸದರಿಯವರಿಗೆ ಆರೋಪಪಟ್ಟಿನ್ನು ಸಿದ್ಧಪಡಿಸಿ ಆರೋಪ–01 ರಿಂದ 03ರನ್ನು ಜಾರಿಗೊಳಿಸಲಾಗಿರುತ್ತದೆ. ಸದರಿ ಷೋಕಾಸ್ ನೋಟಿಸ್ ಮೂಲಕ ಮಾಡಲಾದ ಆರೋಪವನ್ನು ರದ್ದು ಪಡಿಸುವಂತೆ ಮನವಿ ಸಲ್ಲಿಸಿರುತ್ತಾರೆ.

ಶ್ರೀ ಬಿ.ಜಿ.ವಿರುಪಾಕ್ಷಯ್ಯ, ಇವರಿಗೆ ಮೈಸೂರು ವಿವಿ ನಿಲಯದ ಉದ್ಯೋಗಿಗಳ (ಸಿಸಿಎ) ಪರಿನಿಯಮದ ನಿಯಮ 09 ಮತ್ತು 10 ರಂತೆ ದಿನಾಂಕ: 02.04.2019 ಷೋಕಾಸ್ ನೋಟಿಸ್ ಜಾರಿ ಮಾಡಲಾಗಿದ್ದು ಸದರಿಯವರನ್ನು ದಿನಾಂಕ: 07.03.2022ರ ಆದೇಶದ ಮೂಲಕ ಅಮಾನತ್ತುಗೊಳಿಸಲಾಗಿರುತ್ತದೆ. ಸದರಿಯವರು ಅಮಾನತ್ತನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಮಾನ್ಯ ನ್ಯಾಯಾಲಯದ ಮಧ್ಯಂತರ ಆದೇಶದನ್ವಯ ಹಾಗೂ **ಮಾನ್ಯ ಕುಲಪತಿಗಳು 'Wirhdraw the Suspension order Since Shanumuga One man committee in their report did not mention the name of Virupakshaiah as well as there is a stay on suspension by Honorable Court of Karnataka' ಎಂದು ಆದೇಶಿಸಿರುವುದರಿಂದ, ಸದರಿಯವರ ಅಮಾನತ್ತನ್ನು ರದ್ದುಪಡಿಸಿ, ಅಮಾನತ್ತಿನ ಅವಧಿಯನ್ನು ಕರ್ತವ್ಯದ ಅವದಿ ಎಂದು ಪರಿಗಣಿಸಲಾಗಿರುತ್ತದೆ.** ಶ್ರೀ ಬಿ.ಜಿ ವಿರುಪಾಕ್ಷಯ್ಯ, ಇವರು ಅಧೀಕ್ಷಕ ಹುದ್ದೆಯ ಜೇಷ್ಠತೆ ಆಧಾರದನ್ವಯ ನ್ಯಾಯಾಲಯದ ಅಂತಿಮ ತೀರ್ಪಿಗೊಳಪಟ್ಟು ಸಹಾಯಕ ಕುಲಸಚಿವ ಹುದ್ದೆಗೆ ಬಡ್ತಿ ನೀಡಲಾಗಿರುತ್ತದೆ ಎಂಬುದನ್ನು ತಮ್ಮ ಅವಗಾಹನೆಗೆ ತರಲಾಗಿದೆ. ಈ ಸಂಬಂಧವಾಗಿ ಸದರಿಯವರು ವಿಶ್ವವಿದ್ಯಾನಿಲಯವು ಮಾಡಲಾದ ಆರೋಪ (Charges) ಅನ್ನು ರದ್ದು ಪಡಿಸುವಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ WP–14673/2022 ದಾವೆ ಹೂಡಿರುತ್ತಾರೆ, ಪ್ರಸ್ತುತ ಸದರಿ ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇರುವ ಬಗ್ಗೆ ಹಾಗೂ ಸದರಿಯವರಿಗೆ ದಿನಾಂಕ: 02.04.2019 **'ಷೋಕಾಸ್ ನೋಟಿಸ್'** ಜಾರಿಗೊಳಿಸಿ ದೋಷರೋಪಣೆ ಪಟ್ಟಿ ಸಿದ್ಧಪಡಿಸಿ ಆರೋಪಮಾಡಲಾಗಿದ್ದಾದರೂ ಸಹ ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿವಿ ಉದ್ಯೋಗಿಗಳ (ಸಿಸಿಎ) ಪರಿನಿಯಮದ ನಿಯಮ 09(2) ಪ್ರಕಾರ ಕ್ರಮವಹಿಸದಿರುವುದರಿಂದ 'Lapses of Procedure' ಆಗುವ ಸಾಧ್ಯತೆ ಇರುವುದರಿಂದ **"ಶ್ರೀ ಬಿ.ಜಿ ವಿರುಪಾಕ್ಷಯ್ಯ" ಇವರ ಮೇಲೆ ಮಾಡಲಾದ ದೋಷರೋಪಣೆಯನ್ನು ರದ್ದುಗೊಳಿಸುವ ಸಂಬಂಧ 'ಶಿಸ್ತು ಪ್ರಾಧಿಕಾರವಾದ' ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಮುಂದೆ ವಿಷಯವನ್ನು ಚರ್ಚೆ ಹಾಗೂ ನಿರ್ಣಯಕ್ಕೆ ವಿಷಯ ಮಂಡಿಸಲಾಗಿತ್ತು.**

**ಕುಲಪತಿಗಳು** **ಕುಲಸಚಿವರು**

**ದಿನಾಂಕ: 18.03.2023ರಂದು ನಡೆದ 171ನೇ ಸಭೆಯ ವಿಷಯ ಸಂಖ್ಯೆ 171.10ರಲ್ಲಿ ಶ್ರೀ ಬಿ ಜಿ ವಿರುಪಾಕ್ಷಯ್ಯ ಇವರ ಮೇಲೆ ಮಾಡಲಾದ ಆರೋಪವನ್ನು ರದ್ದುಪಡಿಸುವ ಸಂಬಂಧ ಸಮಿತಿಯನ್ನು ರಚಿಸಿ ನಿಯಮಾನುಸಾರ ವಿಚಾರಣೆ ನಡೆಸಿ ಮುಂದಿನ ಕ್ರಮ ಕೈಗೊಳ್ಳುವಂತೆ ತೀರ್ಮಾನಿಸಲಾಗಿತ್ತು.**

**ಆದರೆ ಸದರಿಯವರು ಹೂಡಲಾದ ದಾವೆಗಳಿಗೆ ಮಾನ್ಯ ಉಚ್ಚನ್ಯಾಯಾಲಯವು ದಿನಾಂಕ: 30.06.2023 ರಂದು ಅಂತಿಮ ಆದೇಶ ನೀಡಿದ್ದು, ತೀರ್ಮಾನ ಈ ಕೆಳಕಂಡಂತಿದೆ** (W.P No.14673/2022 ಮತ್ತು W.P No.6294/2022).

(i) W.P No. 14673/2022 is hereby allowed.
(ii) The articles of Charges, dated 02.04.2019 passed by the respondent-University, is set aside
(iii) In view of the allowing W.P No. 14673/2022, no further order is required to be passed in W.P No6294/2022 and the same has become inconsequential. According, W.P. No. 6294/2022 is ***disposed of*** in term of the order passed in W.P No 14673/2022 ಎಂದು ಆದೇಶ ಹೊರಡಿಸಲಾರುತ್ತದೆ.

ಈ ಹಿನ್ನೆಲೆಯಲ್ಲಿ ಶ್ರೀ ಬಿ.ಜಿ ವಿರುಪಾಕ್ಷಯ್ಯ, ಸಹಾಯಕ ಕುಲಸಚಿವ, ಸಾಮಾನ್ಯ ವಿಭಾಗ ಇವರ ಮೇಲೆ ಮಾಡಲಾದ ಆರೋಪ ಹಾಗೂ ದೋಷಾರೋಪನಾ ಪಟ್ಟಿಯನ್ನು ರದ್ದುಗೊಳಿಸಿ, ಅರ್ಹ ದಿನಾಂಕದಿಂದ ನಿಯಮಾನುಸಾರ ಲಭ್ಯವಾಗಬೇಕಾದ ಆರ್ಥಿಕ ಸೌಲಭ್ಯ ಹಾಗೂ ಸೇವಾ ಜೇಷ್ಠತೆಯನ್ನು ಪರಿಗಣಿಸುವ ಸಂಬಂಧ ವಿಷಯವನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕೆ ವಿಷಯವನ್ನು ಮಂಡಿಸಿದೆ.

*****

ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು ವಿವರವು ಸಮಂಜಸವಾಗಿಲ್ಲದ ಕಾರಣದಿಂದ ಪೂರ್ಣ ಮಾಹಿತಿಯನ್ನು ಕಳುಹಿಸಿಕೊಡುವಂತೆ ಜಂಟಿ ಕಾರ್ಯದರ್ಶಿ, ಹಣಕಾಸು ಇಲಾಖೆ ಇವರು ಸಭೆಯಲ್ಲಿ ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಕೋರಿರುವ ವಿವರಗಳನ್ನು ಕಳುಹಿಸಲಾಗುವುದೆಂದು ಸಭೆಗೆ ತಿಳಿಸಿದರು.

<u>ತೀರ್ಮಾನ:</u>

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ವಿವರಣೆಗಳು ಸರಿಯಾಗಿ ಇಲ್ಲದ ಕಾರಣ ಪೂರ್ಣ ವಿವರಗಳನ್ನೊಳಗೊಂಡ ವಿಷಯವನ್ನು ಮುಂದಿನ ಸಭೆಯಲ್ಲಿ ಮಂಡಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

**ವಿಷಯ ಸಂಖ್ಯೆ: 174.09**

**ವಿಷಯ: ಹಣಕಾಸು ಸಮಿತಿಯ 87ನೇ ಸಭೆಯ ನಡವಳಿಯನ್ನು ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಅನುಮೋದಿಸುವ ಬಗ್ಗೆ.**

– * –

ದಿನಾಂಕ: 14/09/2023 ರಂದು ನಡೆದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ 87ನೇ ಸಭೆಯ ನಡವಳಿಯನ್ನು ವ್ಯವಸ್ಥಾಪನಾ ಮಂಡಳಿಯ 174ನೇ ಸಾಮಾನ್ಯ ಸಭೆಗೆ ಅನುಮೋದನೆಗಾಗಿ ಮಂಡಿಸಲಾಗಿದೆ.

*****

ಕುಲಪತಿಗಳು ಕುಲಸಚಿವರು

ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಹಣಕಾಸು ಅಧಿಕಾರಿಗಳನ್ನು ಸಭೆಗೆ ಆಹ್ವಾನಿಸಿ ವಿವರಣೆಗಳನ್ನು ತಿಳಿಸಲು ಮಾನ್ಯ ಕುಲಪತಿಗಳು ತಿಳಿಸಿದರು.

ಹಣಕಾಸು ಅಧಿಕಾರಿಗಳು ಹಣಕಾಸು ಸಮಿತಿಯ 87ನೇ ಸಭೆಯಲ್ಲಿ ಮಂಡಿಸಲಾಗಿದ್ದ ವಿಷಯಗಳ ಬಗ್ಗೆ ಪೂರ್ಣವಾದ ವಿವರಗಳನ್ನು ಸಭೆಗೆ ವಿವರಿಸಿದರು.

ಹಣಕಾಸಿನ ವಿಷಯಕ್ಕೆ ಸಂಬಂಧಪಟ್ಟಂತೆ ಖರ್ಚು–ವೆಚ್ಚಗಳನ್ನು ಕಡಿಮೆ ಮಾಡಿ ಪ್ರವೇಶಾತಿಯನ್ನು ಹೆಚ್ಚು ಮಾಡಬೇಕೆಂದು ಮಾನ್ಯ ಸದಸ್ಯರುಗಳಾದ ಶ್ರೀ. ಕೆ. ಹರೀಶ್ ಗೌಡರು ಹಾಗೂ ಶ್ರೀ. ಡಿ. ರವಿಶಂಕರ್‌ರವರು ಸಭೆಗೆ ತಿಳಿಸಿದರು.

<u>ತೀರ್ಮಾನ:</u>

**ದಿನಾಂಕ: 14.09.2023ರಂದು ನಡೆದ ಕರಾಮುವಿಯ ಹಣಕಾಸು ಸಮಿತಿ 87ನೇ ಸಭೆಯ ನಡಾವಳಿಯನ್ನು ದಿನಾಂಕ: 15.09.2023ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 174ನೇ ಸಾಮಾನ್ಯ ಸಭೆಯಲ್ಲಿ ಅನುಮೋದಿಸಿತು.**

#####

**ವಿಷಯ ಸಂಖ್ಯೆ: 174.10**

**ವಿಷಯ: 61ನೇ ಶೈಕ್ಷಣಿಕ ಮಂಡಳಿ ಸಭೆಯ ನಡಾವಳಿಯನ್ನು ಅನುಮೋದಿಸುವ ಕುರಿತು.**

– * –

ದಿನಾಂಕ: 13.09.2023 ರಂದು ನಡೆದ 61ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ ನಡಾವಳಿಯನ್ನು ದಿನಾಂಕ: 15.09.2023 ರಂದು ನಡೆಯಲಿರುವ ವ್ಯವಸ್ಥಾಪನಾ ಮಂಡಳಿಯ 174ನೇ ಸಾಮಾನ್ಯ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

*****

ಕುಲಸಚಿವರು ಮಾತನಾಡಿ ವಿಶ್ವವಿದ್ಯಾನಿಲಯದ ಕೆಲವು ಪರಿನಿಯಮಗಳ ಕರಡನ್ನು ಸಿದ್ಧಪಡಿಸಿ ಅವುಗಳನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಅನುಮೋದನೆ ಮಂಡಿಸಲಾಗಿದೆ ಎಂದು ವಿವರಿಸಿದರು.

<u>ತೀರ್ಮಾನ:</u>

**ದಿನಾಂಕ: 13.09.2023 ರಂದು ನಡೆದ 61ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ ನಡಾವಳಿಯನ್ನು ದಿನಾಂಕ: 15.09.2023 ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 174ನೇ ಸಾಮಾನ್ಯ ಸಭೆಯಲ್ಲಿ ಅನುಮೋದಿಸಿತು.**

#####

**ವಿಷಯ ಸಂಖ್ಯೆ: 174.11**

**ವಿಷಯ: ಕರಾಮುವಿಯಲ್ಲಿ ಗ್ರೇಡೆಡ್ ಪೇ ನೌಕರರುಗಳಲ್ಲಿ 10 ವರ್ಷಗಳಿಗಿಂತ ಹೆಚ್ಚಿನ ಕಾಲ ಸೇವೆ ಸಲ್ಲಿಸಿರುವ ನೌಕರರುಗಳಿಗೆ ಸರ್ಕಾರದ ನೀಡುವ ಇತರೆ ಸೌಲಭ್ಯಗಳನ್ನು ನೀಡುವ ಬಗ್ಗೆ.**

– * –

ವಿಶ್ವವಿದ್ಯಾನಿಲಯದಲ್ಲಿ ವಿವಿದ ಪದನಾಮದಲ್ಲಿ 10 ವರ್ಷ ಪೂರ್ಣಗೊಂಡಿರುವ ಹಾಗೂ ಹೆಚ್ಚಿನ ಸೇವಾವಧಿ ಹೊಂದಿರುವ ಒಟ್ಟು 121 ಗ್ರೇಡೆಡ್ ಪೇ ನೌಕರರುಗಳಿಗೆ ಮೂಲ ವೇತನದ ಶೇಕಡ 17 ರಷ್ಟು ಮಧ್ಯಂತರ ಪರಿಹಾರ ಭತ್ಯೆ, ತುಟ್ಟಿಭತ್ಯೆ ಹಾಗೂ ಗಳಿಕೆ ರಜೆ ಸೌಲಭ್ಯವನ್ನು ನೀಡುವ ಸಂಬಂಧದ ಬಗೆಗೆ ನೌಕರರು ಮನವಿಯನ್ನು ಸಲ್ಲಿಸಿ ಸೌಲಭ್ಯವನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ನೌಕರರಿಗೆ ಕೋರಿರುವ ಸೌಲಭ್ಯಗಳನ್ನು ನೀಡುವ ಸಂಬಂಧವಾಗಿ, ಈ ಕೆಳಕಂಡಂತೆ ವಿವಿಧ ವರ್ಗದ ಪದನಾಮದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ವಿವರಗಳು.

ಕುಲಪತಿಗಳು | ಕುಲಸಚಿವರು

| ಕ್ರ. ಸಂ. | ಹುದ್ದೆಗಳ ವಿವರ | ಒಟ್ಟು ಸಂಖ್ಯೆ |
|---|---|---|
| 1. | ಡಿ.ಇ.ಓ. | 24 |
| 2. | ದ್ವಿ.ದ.ಗು. | 40 |
| 3. | ಪರಿಚಾರಕ | 32 |
| 4. | ಗಾರ್ಡನರ್ | 09 |
| 5. | ಸ್ವೀಪರ್ | 12 |
| 6. | ಶೌಚಾಲಯ ಸ್ವಚ್ಛತಗಾರರು | 03 |
| 7. | ಸೆಕ್ಯೂರಿಟಿ | 01 |
| | ಒಟ್ಟು | **121** |

ಮುಂದುವರೆದು. ಕ.ರಾ.ಮು.ವಿ. ಯಲ್ಲಿ ವಿವಿಧ ಪದನಾಮದಲ್ಲಿ 07 ವರ್ಷ ಪೂರ್ಣಗೊಳಿಸಿ 10 ವರ್ಷದ ಒಳಗೆ ಸೇವೆ ಸಲ್ಲಿಸಿಸುತ್ತಿರುವ ಒಟ್ಟು 75 ಗ್ರೇಡೆಡ್ ಪೇ ನೌಕರರುಗಳಿಗೆ ಕಾಲಕಾಲಕ್ಕೆ ತುಟ್ಟಿಭತ್ಯೆ ನೀಡುವ ಸಂಬಂದ ಮಾನ್ಯ ವ್ಯವಸ್ಥಾಪನ ಮಂಡಳಿ ಸಭೆಯ ಅನುಮೋದನೆಗಾಗಿ ವಿಷಯ ಮಂಡಿಸಿದೆ.

*****

ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ, ಜಂಟಿ ಕಾರ್ಯದರ್ಶಿ, ಹಣಕಾಸು ಇಲಾಖೆ ರವರು ಮಾತನಾಡಿ 10 ವರ್ಷ ಪೂರ್ಣಗೊಂಡಿರುವ ತಾತ್ಕಾಲಿಕ ನೌಕರರುಗಳಿಗೆ ರೋಸ್ಟರ್ ನಿಯಮಗಳನ್ನು ಅನುಸರಿಸಿರುವುದರ ಬಗ್ಗೆ ಪ್ರಸ್ತಾಪಿಸಿದರು. ನಂತರ ಮಾತನಾಡಿ, ತಾತ್ಕಾಲಿಕ ನೌಕರರುಗಳಿಗೆ ಆಯಾ ಹುದ್ದೆಗೆ ಅನುಗುಣವಾಗಿ ಇರುವ ಮೂಲ ವೇತನದಲ್ಲಿ ರೂ.10/– ಗಳನ್ನು ಕಡಿತಗೊಳಿಸಿ ವೇತನ ನೀಡಬಹುದಾಗಿರುತ್ತದೆಂದು ತಿಳಿಸಿದರು.

ಮಾನ್ಯ ಹಣಕಾಸು ಅಧಿಕಾರಿಗಳು ಮಾತನಾಡಿ ವಿಶ್ವವಿದ್ಯಾನಿಲಯದಲ್ಲಿ 10 ವರ್ಷಗಳಿಗಿಂತ ಹೆಚ್ಚು ಕಾಲ ಸೇವೆ ಸಲ್ಲಿಸಿರುವ ತಾತ್ಕಾಲಿಕ ನೌಕರರುಗಳಿಗೆ ಗ್ರೇಡೆಡ್ ಪೇ ನೀಡುತ್ತಿದ್ದು, ಅವರುಗಳಿಗೂ ಸರ್ಕಾರದ ಇತರೆ ಸವಲತ್ತುಗಳನ್ನು ನೀಡಲು ವ್ಯವಸ್ಥಾಪನಾ ಮಂಡಳಿ ಅನುಮೋದನೆಗೆ ಮಂಡಿಸಲಾಗಿದೆ ಎಂದು ತಿಳಿಸಿದರು.

ಸದಸ್ಯರಾದ ಶ್ರೀ ಅಡಗೂರು ಹೆಚ್.ವಿಶ್ವನಾಥ್ ರವರು ಮಾತನಾಡಿ ಈ ಬಗ್ಗೆ ವಿಶ್ವವಿದ್ಯಾನಿಲಯದಲ್ಲಿ 10 ವರ್ಷಗಳಿಗಿಂತ ಹೆಚ್ಚು ಕಾಲ ಸೇವೆ ಸಲ್ಲಿಸಿರುವ ತಾತ್ಕಾಲಿಕ ನೌಕರರುಗಳಿಗೆ ಗ್ರೇಡೆಡ್ ಪೇ ನೀಡುತ್ತಿದ್ದು, ಈ ಸಂಬಂಧ ಸರ್ಕಾರದ ಇತರೆ ಸೌಲಭ್ಯಗಳನ್ನು ನೀಡಲು ಸರ್ಕಾರದಿಂದ ಮಾರ್ಗದರ್ಶನ ಪಡೆದು ನಿರ್ವಹಣೆ ಮಾಡುವುದು ಸೂಕ್ತವೆಂದು ಸಭೆಗೆ ತಿಳಿಸಿದರು.

ಸದರಿ ವಿಷಯದ ಬಗ್ಗೆ ಶ್ರೀ.ಕೆ.ಹರೀಶ್‌ಗೌಡರು ಮಾತನಾಡಿ ಸದರಿ ವಿಷಯದ ಬಗ್ಗೆ ನಿಯಮಾನುಸಾರ ಕ್ರಮವಹಿಸುವುದು ಸೂಕ್ತವೆಂದು ಸಭೆಗೆ ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ವಿಶ್ವವಿದ್ಯಾನಿಲಯಗಳಲ್ಲಿ 10 ವರ್ಷಕ್ಕಿಂತ ಹೆಚ್ಚು ಕಾಲ ಸೇವೆ ಸಲ್ಲಿಸಿರುವ ತಾತ್ಕಾಲಿಕ ನೌಕರರುಗಳಿಗೆ ಗ್ರೇಡೆಡ್ ಪೇ ನೀಡುವ ಬಗ್ಗೆ ಕೆಲವು ವಿಶ್ವವಿದ್ಯಾನಿಲಯಗಳಲ್ಲಿ ತೀರ್ಮಾನಗಳಿದ್ದು, ಅದರಂತೆ ಕ್ರಮವಹಿಸಲಾಗುವುದು ಎಂದು ಜಂಟಿ ಕಾರ್ಯದರ್ಶಿ, ಹಣಕಾಸು ಇಲಾಖೆ ರವರಿಗೆ ತಿಳಿಸಿದರು.

**ತೀರ್ಮಾನ:**

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ವಿಷಯವನ್ನು ಮುಂದಿನ ಸಭೆಗೆ ಮಂಡಿಸಲು ತೀರ್ಮಾನಿಸಲಾಯಿತು.**

#####

ಕುಲಪತಿಗಳು

ಕುಲಸಚಿವರು

**ವಿಷಯ ಸಂಖ್ಯೆ: 174.12**

**ವಿಷಯ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ Intelligent Centralized Campus and Exam Surveillance System ಯೋಜನೆಯನ್ನು ಅನುಷ್ಠಾನಗೊಳಿಸಿ ನೀಡುವ ಕುರಿತು**

– * –

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಎಲ್ಲಾ ಪ್ರಾದೇಶಿಕ ಕೇಂದ್ರಗಳು ಮತ್ತು ಪರೀಕ್ಷಾ ಕೇಂದ್ರಗಳಲ್ಲಿ ಯಾವುದೇ ವ್ಯತ್ಯಯಗಳು ಅಥವಾ ಅಕ್ರಮಗಳು ಉಂಟಾಗದಂತೆ ನಿಯಮಾನುಸಾರ ಸುಸೂತ್ರವಾಗಿ ಪರೀಕ್ಷೆಗಳನ್ನು ನಡೆಸಲು ಮತ್ತು ಸದರಿ ಪರೀಕ್ಷೆಗಳನ್ನು ವಿಶ್ವವಿದ್ಯಾನಿಲಯದ ಕೇಂದ್ರ ಕಚೇರಿಯಲ್ಲಿ ಕುಳಿತು ನೇರವಾಗಿ ಪರಿವೀಕ್ಷಿಸಲು ಅನುವಾಗುವಂತೆ ಪರೀಕ್ಷಾ ವಿಭಾಗಕ್ಕೆ Intelligent Centralized Campus and Exam Surveillance System ತಂತ್ರಜ್ಞಾನವನ್ನು ಅಳವಡಿಸಿ ಅನುಷ್ಠಾನಗೊಳಿಸಿ ನೀಡುವಂತೆ ಈ ಮೂಲಕ ತಮ್ಮನ್ನು ಕೋರುತ್ತಾ, ತಮ್ಮ ಅವಗಾಹನೆಗೆ ತರಬಯಸುತ್ತೇನೆ.

*****

ಈ ವಿಷಯಕ್ಕೆ ಸಂಬಂಧಪಟ್ಟಂತೆ ಕರಾಮುವಿಯಲ್ಲಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳು ಪರೀಕ್ಷಾ ಸಮಯದಲ್ಲಿ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳನ್ನು ನಡೆಸುವ ಸಂದರ್ಭದಲ್ಲಿ AI Analystics Powered Intelligent Examination Surveillance ಮುಖಾಂತರ ಮಾಡಲು ಒಟ್ಟು ಅಂದಾಜು ವೆಚ್ಚ ರೂ.5.70 ಕೋಟಿಗಳಷ್ಟು ವೆಚ್ಚವಾಗುತ್ತದೆಂದು ತಿಳಿಸಿರುತ್ತಾರೆ. ಇದರಲ್ಲಿ ಒಂದು ಕೇಂದ್ರಕ್ಕೆ ಎಷ್ಟು ಹಣ ಖರ್ಚಾಗುತ್ತದೆ ಎಂಬ ಮಾಹಿತಿಗಳು ಅವಶ್ಯಕವಾಗಿರುತ್ತದೆಂದು ಸದಸ್ಯರಾದ ಶ್ರೀ.ಡಿ. ರವಿಶಂಕರ್‌ರವರು ಸಭೆಗೆ ತಿಳಿಸಿದರು.

ಸದಸ್ಯರಾದ ಶ್ರೀ ಅಡಗೂರು ಹೆಚ್. ವಿಶ್ವನಾಥ್ ರವರು ಮಾತನಾಡಿ ಪರೀಕ್ಷಾ ಕೇಂದ್ರಗಳಲ್ಲಿ CC TV ಗಳನ್ನು ಅಳವಡಿಸಿರುತ್ತಾರೆ. ಪರೀಕ್ಷೆಗಳು ನಡೆಯುವ ಸಂದರ್ಭಗಳಲ್ಲಿಯೇ ವಿದ್ಯುತ್ ವ್ಯತ್ಯಯ ಹಾಗೂ CC TV ಕೆಟ್ಟು ಹೋಗುವುದು ಇತ್ಯಾದಿಗಳು ಉಂಟಾಗುತ್ತವೆ ಎಂದು ಸಭೆಯಲ್ಲಿ ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ನಮ್ಮ ವಿಶ್ವವಿದ್ಯಾನಿಲಯದ ಪರೀಕ್ಷಾ ಕೇಂದ್ರಗಳನ್ನು ಆಯಾ ಜಿಲ್ಲೆಯಲ್ಲಿರುವ ಪ್ರಾದೇಶಿಕ ಕೇಂದ್ರಗಳಲ್ಲಿ ನಡೆಸುವುದು ಸೂಕ್ತವಾಗಿರುತ್ತದೆ. ಬಾಡಿಗೆ ಆಧಾರದ ಮೇಲೆ ಪಡೆಯುವ ಪರೀಕ್ಷಾ ಕೇಂದ್ರಗಳಿಗೆ ಇವುಗಳನ್ನು ಅಳವಡಿಸುವುದರಿಂದ ಇವುಗಳ ನಿರ್ವಹಣೆ ಬಗ್ಗೆ ಚಿಂತಿಸಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

**ತೀರ್ಮಾನ:**

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ನಂತರ ಸಭೆಯು, ಈ ವಿಷಯದ ಬಗ್ಗೆ ಪೂರ್ಣ ಮಾಹಿತಿಗಳೊಂದಿಗೆ ಮುಂದಿನ ಸಭೆಯಲ್ಲಿ ಮಂಡಿಸಲು ತೀರ್ಮಾನಿಸಲಾಯಿತು.**

#####

**ವಿಷಯ ಸಂಖ್ಯೆ: 174.13**

**ವಿಷಯ: ವಿಶ್ವವಿದ್ಯಾನಿಲಯದ ಬೋಧಕೇತರ ನೌಕರರುಗಳ ಕುಂದು ಕೊರತೆ ಸಮಿತಿ ಸಭೆಯ ನಡಾವಳಿಯ ಬಗ್ಗೆ.**

– * –

ಕುಲಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 18.08.2023ರಂದು ನಡೆದ ಕರಾಮುವಿ ಖಾಯಂ ಹಾಗೂ ತಾತ್ಕಾಲಿಕ ಬೋಧಕೇತರ ನೌಕರರುಗಳು ಸಲ್ಲಿಸಿರುವ ಮನವಿ ಪತ್ರಗಳನ್ನು ಪರಿಶೀಲಿಸುವ ಸಂಬಂಧ ನಡಾವಳಿಯ ಬಗ್ಗೆ.

**ಕುಲಪತಿಗಳು** | **ಕುಲಸಚಿವರು**

1. ದಿನಾಂಕ: 13.03.2023ರಂದು ಪದೋನ್ನತಿಗೆ ಸಂಬಂಧಿಸಿದಂತೆ ಸಲ್ಲಿಸಿದ ಮನವಿ ಬಗ್ಗೆ ಪ್ರಸ್ತಾಪಿಸಿ ಸಮಿತಿಯ ಅಧ್ಯಕ್ಷರು ದ್ವಿತೀಯ ದರ್ಜೆ ಗುಮಾಸ್ತ / ಡಿ.ಇ.ಓ ಹುದ್ದೆಯಿಂದ ನೇರ ನೇಮಕಾತಿಗೆ ಮೀಸಲಿರಿಸಿದ್ದ ಪ್ರಥಮ ದರ್ಜೆ ಗುಮಾಸ್ತ ಹುದ್ದೆಗೆ 30 ಮಂದಿ ಪದೋನ್ನತಿ ನೀಡಲಾಗಿರುತ್ತದೆ (ಆದೇಶ ಸಂಖ್ಯೆ: ಕರಾಮುವಿ.ಆವಿ.ಸಿಬ್ಬಂದಿ-2/776/2022-23, ದಿನಾಂಕ: 25.10.2022)
2. ಪ್ರಥಮ ದರ್ಜೆ ಗುಮಾಸ್ತ ಹುದ್ದೆಯಿಂದ ಹಿರಿಯ ಸಹಾಯಕ ಹುದ್ದೆಗೆ 08 ಮಂದಿಗೆ (ಆದೇಶ ಸಂಖ್ಯೆ: ಕರಾಮುವಿ.ಆವಿ.ಸಿಬ್ಬಂದಿ-2/950/2022-23, ದಿನಾಂಕ: 25.10.2022)
3. ಪ್ರಥಮ ದರ್ಜೆ ಗುಮಾಸ್ತ ಹುದ್ದೆಯಿಂದ ಹಿರಿಯ ಸಹಾಯಕ ಹುದ್ದೆಗೆ 02 ಮಂದಿಗೆ (ಆದೇಶ ಸಂಖ್ಯೆ: ಕರಾಮುವಿ.ಆವಿ.ಸಿಬ್ಬಂದಿ-2/776/2022-23, ದಿನಾಂಕ: 31.10.2022)
4. ಕಿರಿಯ ಅಭಿಯಂತರ ಹುದ್ದೆಯಿಂದ ಸಹಾಯಕ ಅಭಿಯಂತರ ಹುದ್ದೆಗೆ ಪದೋನ್ನತಿ (ಆದೇಶ ಸಂಖ್ಯೆ: ಕರಾಮುವಿ.ಆವಿ.ಸಿಬ್ಬಂದಿ-2/740/2022-23, ದಿನಾಂಕ: 02.11.2022)
5. ದ್ವಿತೀಯ ದರ್ಜೆ ಗುಮಾಸ್ತ / ಡಿ.ಇ.ಓ ಹುದ್ದೆಯಿಂದ ಪ್ರಥಮ ದರ್ಜೆ ಗುಮಾಸ್ತ ಹುದ್ದೆಗೆ 10 ಮಂದಿಗೆ ಪದೋನ್ನತಿ (ಆದೇಶ ಸಂಖ್ಯೆ: ಕರಾಮುವಿ.ಆವಿ.ಸಿಬ್ಬಂದಿ-2/776/2022-23, ದಿನಾಂಕ: 04.11.2022).
6. ಪರಿಚಾರಕ / ಸೇವಕ ಹುದ್ದೆಯಿಂದ ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಗೆ (ಆದೇಶ ಸಂಖ್ಯೆ: ಕರಾಮುವಿ.ಆವಿ.ಸಿಬ್ಬಂದಿ-2/776/2022-23, ದಿನಾಂಕ: 05.11.2022)ರನ್ವಯ 05 ಮಂದಿಗೆ ಪದೋನ್ನತಿ ನೀಡಲಾಗಿರುತ್ತದೆ.
7. ಮೇಲ್ಕಂಡ ಪದೋನ್ನತಿಗೆ ಸಂಬಂಧಿಸಿದಂತೆ ದಿನಾಂಕ: 21.01.2023ರಂದು ನಡೆದ 170ನೇ ವ್ಯವಸ್ಥಾಪನಾ ಮಂಡಳಿ ತೀರ್ಮಾನದನ್ವಯ ದಿನಾಂಕ: 10.02.2023ರ ಆದೇಶದಂತೆ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯ ವರದಿಯನ್ನು ದಿನಾಂಕ: 18.03.2023 ರಂದು ನಡೆದ ವ್ಯವಸ್ಥಾಪನಾ ಮಂಡಳಿಯಲ್ಲಿ ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾಗಿ ಪರಿಶೀಲನಾ ಸಮಿತಿಯ ಶಿಫಾರಸ್ಸಿನ್ವಯ ನೀಡಿರುವ ಪದೋನ್ನತಿಯನ್ನು ಹಿಂಪಡೆಯಲು ತೀರ್ಮಾನವಾಗಿರುತ್ತದೆ.

**ತೀರ್ಮಾನ:** ಈ ಮಧ್ಯ ಸದರಿ ನೌಕರರು ಹಲವಾರು ವರ್ಷದಿಂದ ಒಂದೇ ಹುದ್ದೆಯಲ್ಲಿ ಸೇವೆ ಸಲ್ಲಿಸಿರುವುದನ್ನು ಪರಿಗಣಿಸಿ ನೀಡಲಾದ ಪದೋನ್ನತಿಯನ್ನು ಮಾನವೀಯತೆ ದೃಷ್ಟಿಯಿಂದ ಪರಿಗಣಿಸಲು ಕೋರಿರುವ ಹಿನ್ನಲೆಯಲ್ಲಿ ಈಗಾಗಲೇ ಒಂದು ವರ್ಷದಿಂದ ಪದೋನ್ನತಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಇವರುಗಳಿಗೆ ಪದೋನ್ನತಿಯನ್ನು ಕ್ರಮಬದ್ಧಗೊಳಿಸುವ ಸಂಬಂಧ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಗಮನಕ್ಕೆ ತಂದು ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು.

- ರವಿ .ಕೆ, ವಿನುತ .ಕೆ.ಆರ್, ಲೋಕೇಶ್ ಮತ್ತು ಚನ್ನಬಸಪ್ಪ .ಡಿ.ಎಸ್ ಗ್ರೇಡೆಡ್ ಪೇ ನೌಕರರು ಪರಿಚಾರಕ ಹುದ್ದೆ ಪರಿಗಣಿಸುವಂತೆ ಕೋರಿರುವ ಮನವಿಯ ಬಗೆಗೆ ಸಂಬಂಧ, ಅದರಂತೆ ಪರಿಶೀಲಿಸಿ ನಿಯಮಾನುಸಾರ ಕ್ರಮವಹಿಸುವುದು.

**ತೀರ್ಮಾನ:** ಸಮಿತಿಯ ಶಿಫಾರಸ್ಸಿನನ್ವಯ ಕ್ರಮಕೈಗೊಳ್ಳಲು ಹಾಗೂ ಸೇವಾನುಭವ ಪರಿಗಣಿಸಿ ಪರಿಚಾರಕ ಹುದ್ದೆಗೆ ಪರಿಗಣಿಸಲು ಕ್ರಮವಹಿಸಲು ತೀರ್ಮಾನಿಸಲಾಯಿತು.

*****

<u>ತೀರ್ಮಾನ:</u>

**ಈ ಮೇಲ್ಕಂಡ ವಿಷಯಗಳಿಗೆ ಸಭೆಯು ಅನುಮೋದನೆ ನೀಡಿ ಉಳಿದಂತಹ ವಿಷಯವನ್ನು ಮುಂದಿನ ಸಭೆಯಲ್ಲಿ ಮಂಡಿಸಲು ತೀರ್ಮಾನಿಸಲಾಯಿತು.**

#####

ಕುಲಪತಿಗಳು ಕುಲಸಚಿವರು

ವಿಷಯ ಸಂಖ್ಯೆ: 174.14

ವಿಷಯ: ವಿಶ್ವವಿದ್ಯಾನಿಲಯದ ತಾತ್ಕಾಲಿಕ ಬೋಧಕ ಸಿಬ್ಬಂದಿ ನೇಮಕಾತಿ ಬಗೆಗೆ.

– * –

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ನ್ಯಾಕ್ ಎ + ದರ್ಜೆ ದೊರೆತಿದ್ದು, ವಿಶ್ವವಿದ್ಯಾನಿಲಯದ ಧನ ಸಹಾಯ ಆಯೋಗ (UGC) F.No.30–30/2023 (DEB-II) Date: 11.09.2023ರ ಪತ್ರದ ಮುಖೇನಾ 43 (ನಲವತ್ತಾ ಮೂರು) ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಕಾರ್ಯಕ್ರಗನ್ನು ಹಮ್ಮಿಕೊಳ್ಳಲು ಮಾನ್ಯತೆ ದೊರೆತಿರುತ್ತದೆ. ಹಾಗೂ online ಮೂಲಕ 02 ಸ್ನಾತಕ ಹಾಗೂ 08 ಸ್ನಾತಕೋತ್ತರ ಕಾರ್ಯಕ್ರಮಗಳನ್ನು ಪ್ರಾರಂಭಿಸಲು UGC-DEB, F.No.39-2/2023 (DEB-I) Date: 17.08.2023ರ ಪತ್ರದ ಮುಖೇನಾ ಮಾನ್ಯತೆ ದೊರೆತಿರುತ್ತದೆ. UGC-ODL Regulation 2020ರ ಪ್ರಕಾರ ಪ್ರತಿ ಶೈಕ್ಷಣಿಕ ಕಾರ್ಯಕ್ರಮಕ್ಕೆ ಮೂರು ಬೋಧಕ ಸಿಬ್ಬಂದಿ ಹಾಗೂ ಯು.ಜಿ, ಪಿ.ಜಿ ಎರಡು ಕಾರ್ಯಕ್ರಮಗಳಿದ್ದಲ್ಲಿ ಕನಿಷ್ಟ 05 ಬೋಧಕ ಸಿಬ್ಬಂದಿ ಇರುವುದು ಕಡ್ಡಾಯವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ–1/100–ಕಡತ(3)/ 2023–24, ದಿನಾಂಕ: 31.07.2023 ರನ್ವಯ ಶೈಕ್ಷಣಿಕ ಕಾರ್ಯಚಟುವಟಿಕೆಗಳನ್ನು ಸಕಾಲದಲ್ಲಿ ಪ್ರಾರಂಭಿಸಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು UGC-ODL Regulation 2020ರ ಪ್ರಕಾರ ಅವಶ್ಯವಿರುವ ವಿವಿಧ ಅಧ್ಯಯನ ವಿಭಾಗಗಳಿಗೆ 32 ಹುದ್ದೆಗಳನ್ನು ವಿಶ್ವವಿದ್ಯಾನಿಲಯದ ಪರಿನಿಯಮದ ಮೂಲಕ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲು ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

ವಿವಿಧ ಬೋಧಕ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳುವ ಸಂಬಂಧ ಆಯಾಯ ವಿಷಯಗಳಿಗೆ ವಿಷಯ ತಜ್ಞರನ್ನು ಒಳಗೊಂಡಂತೆ ವಿಶ್ವವಿದ್ಯಾನಿಲಯದ ಕಾಯ್ದೆ ಪ್ರಕಾರ ನೇಮಕಾತಿ ಮಂಡಳಿಯನ್ನು ರಚಿಸಿ, ಸಂದರ್ಶನ ನಡೆಸಲಾಗಿತ್ತು. ಸರ್ಕಾರದ ನಿರ್ದೇಶನದನ್ವಯ ವಿಷಯವಾರು ರೋಸ್ಟರ್ ಬಿಂದುಗಳಿಗೆ ಅನುಗುಣವಾಗಿ ಕ್ರಮವಹಿಸುವಂತೆ ತಿಳಿಸಲಾಗಿದ್ದು, ಈ ಸಂಬಂಧ ವಿಷಯವನ್ನು ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕೆ ಮಂಡಿಸಿದೆ.

*****

ಜಂಟಿ ಕಾರ್ಯದರ್ಶಿ, ಹಣಕಾಸು ಇಲಾಖೆ ಇವರು ಮಾತನಾಡಿ ತಾತ್ಕಾಲಿಕ ನೇಮಕಾತಿಗಳನ್ನು ರೋಸ್ಟರ್ ನಿಯಮಾನುಸಾರ ಮಾಡಬೇಕು ಎಂದು ತಿಳಿಸಿದರು.

ತೀರ್ಮಾನ:

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ನಂತರ ಸರ್ಕಾರದ ನಿಯಮಾವಳಿಗಳ ಪ್ರಕಾರ ರೋಸ್ಟರ್ ಬಿಂದುಗಳಿಗೆ ಅನುಗುಣವಾಗಿ ಪ್ರತ್ಯೇಕ ಅಧಿಸೂಚನೆ ಹೊರಡಿಸಿ ನಂತರ ಕ್ರಮವಹಿಸಬಹುದಾಗಿರುತ್ತದೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

ವಿಷಯ ಸಂಖ್ಯೆ: 174.15

ವಿಷಯ: ಡಾ. ತೇಜಸ್ವಿ ನವಿಲೂರ್, ಸಹ ಪ್ರಾಧ್ಯಾಪಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ಹಾಗೂ ಸಂಶೋಧನಾ ವಿಭಾಗ, ಕರಾಮುವಿ, ಮೈಸೂರು ಇವರು ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ದಾಖಲಿಸಲಾಗಿದ್ದ ರಿಟ್ ಅರ್ಜಿ ಸಂಖ್ಯೆ: WP. 52225/2019ರ ಸಂಬಂಧ ನೀಡಲಾದ ತೀರ್ಪಿನ ಬಗ್ಗೆ.

– * –

ಕುಲಪತಿಗಳು ಕುಲಸಚಿವರು

ಡಾ. ತೇಜಸ್ವಿ ನವಿಲೂರ್, ಸಹ ಪ್ರಾಧ್ಯಾಪಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ಹಾಗೂ ಸಂಶೋಧನಾ ವಿಭಾಗ, ಕರಾಮುವಿ, ಮೈಸೂರು ಇವರು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಲಾಗಿದ್ದ ರಿಟ್ ಅರ್ಜಿ ಸಂಖ್ಯೆ: WP. 52225/2019ರ ಸಂಬಂಧ ದಿನಾಂಕ: 12ನೇ ಸೆಪ್ಟಂಬರ್ 2023 ರಂದು ಆದೇಶ ನೀಡಲಾಗಿದ್ದು, ಸದರಿ ವಿವರಗಳನ್ನು ಮುಂದಿನ ಕ್ರಮಕ್ಕಾಗಿ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಮಂಡಿಸಲಾಗಿದೆ.

*****

ಜಂಟಿ ಕಾರ್ಯದರ್ಶಿ, ಹಣಕಾಸು ಇಲಾಖೆ ಇವರು ಮಾತನಾಡಿ WP. 52225/2019ರ ಸಂಬಂಧ ದಿನಾಂಕ: 12ನೇ ಸೆಪ್ಟಂಬರ್ 2023 ರಂದು ಆದೇಶದ ಪ್ರತಿಯನ್ನು ಕಳುಹಿಸಿಕೊಡುವಂತೆ ಸಭೆಗೆ ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಆದೇಶದ ಪ್ರತಿಯನ್ನು ಕಳುಹಿಸಿಕೊಡಲಾಗುವುದೆಂದು ತಿಳಿಸಿದರು.

**ತೀರ್ಮಾನ:**

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ನಂತರ ಸಭೆಯು, ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿಕೊಂಡಿರುವ ನಿಯಮಾವಳಿಗಳ ರೀತ್ಯಾ ಹಾಗೂ ರಾಜ್ಯ ಉಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಕಾನೂನು ಸಲಹೆಯನ್ನು ಪಡೆದು ಮುಂದಿನ ಕ್ರಮ ವಹಿಸಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

**ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಿದ ವಿಷಯಗಳು:**

1. **ವಿಷಯ: ಕರಾಮುವಿಯಲ್ಲಿ ಡಾ. ಹೆಚ್.ಕೆ. ಜಗದೀಶ್ ಬಾಬು ರವರು ಕರಾಮುವಿಯಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ವಿಶ್ವವಿದ್ಯಾನಿಲಯದ ಘನತೆ - ಗೌರವಕ್ಕೆ ಚ್ಯುತಿ ಬರುವಂತೆ ವರ್ತಿಸುತ್ತಿರುವ ವಿಷಯವನ್ನು ಸಭೆಯ ಗಮನಕ್ಕೆ ತಂದರು.**

******

ಮಾನ್ಯ ಕುಲಪತಿಗಳು ಮಾತನಾಡಿ, ಸದರಿ ಸಿಬ್ಬಂದಿಯು ಕರಾಮುವಿಯ ಅಧ್ಯಾಪಕರ ಸಂಘದ ಕಾರ್ಯದರ್ಶಿಯಾಗಿದ್ದು, ಅನಾವಶ್ಯಕವಾಗಿ ಮಾಧ್ಯಮಗಳ ಮುಖಾಂತರ ವಿಶ್ವವಿದ್ಯಾನಿಲಯದಲ್ಲಿ 2023–24ನೇ ಶೈಕ್ಷಣಿಕ ಸಾಲಿಗೆ ಮಾನ್ಯತೆ ಇಲ್ಲದೆ ಪ್ರವೇಶಾತಿ ಪಡೆಯುತ್ತಿದ್ದಾರೆಂದು ವಿಶ್ವವಿದ್ಯಾನಿಲಯಕ್ಕೆ ಕೆಟ್ಟ ಹೆಸರು ಬರುವ ರೀತಿ ಮಾಧ್ಯಮಗಳಲ್ಲಿ ವಿಷಯಗಳನ್ನು ಬಿತ್ತರಿಸಿರುತ್ತಾರೆ. ಟಿ.ವಿ, ಪತ್ರಿಕೆ, ವ್ಯಾಟ್ಸಾಪ್, ಮುಖಾಂತರ ವಿಶ್ವವಿದ್ಯಾನಿಲಯದ ವಿರುದ್ಧ ಅಪಪ್ರಚಾರ, ಮಾಡುತ್ತಿರುವುದರಿಂದ ಇವರ ಮೇಲೆ ಶಿಸ್ತು ಕ್ರಮ ಜರುಗಿಸಬೇಕಾಗಿರುತ್ತದೆಂದು ಸಭೆಯ ಗಮನಕ್ಕೆ ತಂದರು.

ಜಂಟಿ ಕಾರ್ಯದರ್ಶಿ, ಹಣಕಾಸು ಇಲಾಖೆ ಇವರು ಮಾತನಾಡಿ ವಿಶ್ವವಿದ್ಯಾನಿಲಯದಲ್ಲಿ ಸದರಿಯವರು ಸಹಾಯಕ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ವಿ.ವಿ.ನಿಲಯಕ್ಕೆ ಅನಾವಶ್ಯಕವಾಗಿ ಮಾಧ್ಯಮಗಳಲ್ಲಿ ಕೆಟ್ಟ ಹೆಸರು ಬರುವ ರೀತಿ ಮಾಡುತ್ತಿರುವುದರಿಂದ ಸದರಿಯವರ ಮೇಲೆ CCA ನಿಯಮಗಳ ಪ್ರಕಾರ ಅವರ ಮೇಲೆ ಶಿಸ್ತು ಕ್ರಮವಹಿಸಬೇಕೆಂದು ಸಭೆಗೆ ತಿಳಿಸಿದರು.

ಸದಸ್ಯರುಗಳಾದ ಶ್ರೀ ಅಡಗೂರು ಹೆಚ್. ವಿಶ್ವನಾಥ್, ಶ್ರೀ. ಕೆ. ಹರೀಶ್ ಗೌಡ ಮತ್ತು ಶ್ರೀ. ಡಿ. ರವಿಶಂಕರ್‌ರವರು ಮಾತನಾಡಿ ವಿಶ್ವವಿದ್ಯಾನಿಲಯದ ಯಾವುದೇ ನೌಕರರು ವಿಶ್ವವಿದ್ಯಾನಿಲಯಕ್ಕೆ ಕೆಟ್ಟ ಹೆಸರು ಬರುವ ರೀತಿಯಲ್ಲಿ ನಡೆಯುತ್ತಿದ್ದರೆ, ಮಾಧ್ಯಮಗಳ ಮುಖಾಂತರ ಅಪಪ್ರಚಾರ ಮಾಡುತ್ತಿದ್ದರೆ, ಅವರುಗಳ ಮೇಲೆ ಶಿಸ್ತು ಕ್ರಮ ಕ್ರಮಕೈಗೊಳ್ಳಬಹುದಾಗಿರುತ್ತದೆಂದು ಸಭೆಗೆ ತಿಳಿಸಿದರು.

**ಕುಲಪತಿಗಳು** **ಕುಲಸಚಿವರು**

ತೀರ್ಮಾನ:

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ನಂತರ ಸಭೆಯು, ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿಕೊಂಡಿರುವ ಶಿಸ್ತು ನಿಯಮಾವಳಿಗಳ ಪ್ರಕಾರ (CCA ಪ್ರಕಾರ) ಅಂತಹ ನೌಕರರ ಮೇಲೆ ಕೂಡಲೇ ಶಿಸ್ತು ಕ್ರಮ ಜರುಗಿಸಬೇಕೆಂದು ಸಭೆಯು ಒಮ್ಮತದಿಂದ ತೀರ್ಮಾನಿಸಿತು.**

#####

**2. ವಿಷಯ: ಕರಾಮುವಿಯಲ್ಲೂ 10+2 ಕಾರ್ಯಕ್ರಮವನ್ನು ನಡೆಸುವ ಬಗ್ಗೆ.**

– * –

ಸದಸ್ಯರಾದ ಶ್ರೀ ಅಡಗೂರು ಹೆಚ್. ವಿಶ್ವನಾಥ್‌ರವರು ಮಾತನಾಡಿ, ಈ ಕರಾಮುವಿಯಲ್ಲಿ 10+2 ಕಾರ್ಯಕ್ರಮವನ್ನು ನಡೆಸಲು ಸರ್ಕಾರದಿಂದ ಒಪ್ಪಿಗೆ ಪಡೆದು ನಡೆಸಬೇಕಾಗಿದೆ. ಕಾರಣವೇನೆಂದರೆ NEP ಶಿಕ್ಷಣದ ಬಗ್ಗೆ 10+2 ಆಗಿರಲೇಬೇಕು. ಆದುದರಿಂದ ನಮ್ಮ ರಾಜ್ಯದಲ್ಲಿ ಹೆಚ್ಚಿನ ಜನರು ಗ್ರಾಮೀಣ ಪ್ರದೇಶದಲ್ಲಿ ಇರತಕ್ಕವರು ಮತ್ತು ಹೈದ್ರಾಬಾದ್ - ಕರ್ನಾಟಕ ಪ್ರದೇಶವು ಬಹಳ ಹಿಂದುಳಿದ ಪ್ರದೇಶವಾಗಿದ್ದು, ಅವುಗಳ ಅಭಿವೃದ್ಧಿಗೆ ಸರ್ಕಾರ ಹಲವು ಕಾರ್ಯಕ್ರಮಗಳನ್ನು ನಡೆಸುತ್ತಿರುವುದರಿಂದ ಹಾಗೂ ಈ ಪ್ರದೇಶವಾರು ವಿದ್ಯಾರ್ಥಿಗಳಿಗೆ ಉದ್ಯೋಗಕ್ಕೆ ಅನುಕೂಲವಾಗುವ ರೀತಿಯಲ್ಲಿ ಶೇ.8ರಷ್ಟು ಮೀಸಲಾತಿಯನ್ನು ನೀಡಿದ್ದು, ಆ ಪ್ರದೇಶವಾರು ವಿದ್ಯಾರ್ಥಿಗಳು ಅನಾವಶ್ಯಕವಾಗಿ, ಕುಟುಂಬದ ತೊಂದರೆಯಿಂದಾಗಿ ವಿದ್ಯಾಭ್ಯಾಸವನ್ನು ಅರ್ಧಕ್ಕೆ ನಿಲ್ಲಿಸಿರುತ್ತಾರೆ. ಇವರುಗಳಿಗೂ ಸಹ ಅನುಕೂಲವಾಗುವಂತೆ ಕರ್ನಾಟಕ ರಾಜ್ಯಾದ್ಯಂತ ಇರುವ ಮುಕ್ತ ವಿಶ್ವವಿದ್ಯಾನಿಲಯದಲ್ಲೂ 10+2 (ದ್ವಿತೀಯ ಪಿಯುಸಿ) ಕಾರ್ಯಕ್ರಮವನ್ನು ನಡೆಸುವುದರಿಂದ ಬಡ ಜನರಿಗೆ ಅನುಕೂಲವಾಗುತ್ತದೆ. ಈ ಬಗ್ಗೆ ವಿಶ್ವವಿದ್ಯಾನಿಲಯದಿಂದ ಪತ್ರ ವ್ಯವಹಾರ ಮಾಡಬೇಕು. ಸರ್ಕಾರದ ಮಟ್ಟದಲ್ಲಿ ನಾವು 4 ಪ್ರತಿನಿಧಿಗಳು ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಮುಖ್ಯ ಕಾರ್ಯದರ್ಶಿಗಳು ಹಾಗೂ ಶಿಕ್ಷಣ ಸಚಿವರುಗಳ ಬಳಿ ಚರ್ಚಿಸಿ ಕ್ರಮವಹಿಸಲಾಗುವುದೆಂದು ಸಭೆಗೆ ಗಮನಕ್ಕೆ ತಂದರು ಮತ್ತು ಜಂಟಿ ಕಾರ್ಯದರ್ಶಿ, ಹಣಕಾಸು ಇಲಾಖೆ ಇವರು ಸಹ ಇದಕ್ಕೆ ಕೈ ಜೋಡಿಸಬೇಕೆಂದು ತಿಳಿಸಿದರು.

ಸದಸ್ಯರಾದ ಶ್ರೀ. ಬಿ.ಜಿ.ಪಾಟೀಲ್ ರವರು ಮಾತನಾಡಿ ಹೈದ್ರಾಬಾದ್–ಕರ್ನಾಟಕ ಪ್ರದೇಶಗಳು ಬಹಳ ಹಿಂದುಳಿದ ಪ್ರದೇಶವಾಗಿದ್ದು, ಜನರು ಬಡತನದಿಂದ ಶಿಕ್ಷಣ ಇಲ್ಲದೆ ವಂಚಿತರಾಗಿರುವುದರಿಂದ ಆ ಪ್ರದೇಶದ ಜನರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ವ್ಯವಸ್ಥೆ ಕಲ್ಪಿಸಲು ಸರ್ಕಾರ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅದೇ ರೀತ್ಯಾ ಕರಾಮುವಿಯಿಂದಲೂ ಸಹ 10+2 (ದ್ವಿತೀಯ ಪಿಯುಸಿ) ಕಾರ್ಯಕ್ರಮವನ್ನು ನಡೆಸುವುದರಿಂದ ಅಲ್ಲಿರುವ ಜನರಿಗೆ ಅನುಕೂಲವಾಗುತ್ತದೆಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಕುಲಪತಿಗಳು ಮಾತನಾಡಿ 10+2 ಕಾರ್ಯಕ್ರಮವನ್ನು ನಡೆಸಲು ಸರ್ಕಾರದ ಅನುಮತಿ ಹಾಗೂ ಪಿ.ಯು ಬೋರ್ಡ್‌ರವರಿಂದ ಅನುಮತಿ ಪಡೆಯಬೇಕಾಗಿರುತ್ತದೆಂದು ಸಭೆಗೆ ವಿವರಿಸಿದರು.

ಈ ವಿಚಾರವಾಗಿ ಜಂಟಿ ಕಾರ್ಯದರ್ಶಿ, ಹಣಕಾಸು ಇಲಾಖೆ ಇವರು ಮಾತನಾಡಿ ವಿಶ್ವವಿದ್ಯಾನಿಲಯದಿಂದ ಸರ್ಕಾರಕ್ಕೆ ಪತ್ರ ವ್ಯವಹಾರ ಮಾಡಿ ಅದರ ಪ್ರತಿ ಮತ್ತು ವಿವರಗಳನ್ನು ನೀಡಿದಲ್ಲಿ ನಾವು ಈ ಬಗ್ಗೆ ಕ್ರಮವಹಿಸಲಾಗುವುದೆಂದು ಸಭೆಗೆ ತಿಳಿಸಿದರು.

ತೀರ್ಮಾನ:

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ನಂತರ ಸಭೆಯು, ಕರಾಮುವಿಯಲ್ಲಿ 10+2 ಕಾರ್ಯಕ್ರಮವನ್ನು ನಡೆಸುವ ಸಂಬಂಧ ಸರ್ಕಾರದೊಂದಿಗೆ ಈ ಕೂಡಲೇ ಪತ್ರ ವ್ಯವಹಾರ ನಡೆಸುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

**ಕುಲಪತಿಗಳು** **ಕುಲಸಚಿವರು**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಎಲ್ಲಾ ವ್ಯವಸ್ಥಾಪನಾ ಮಂಡಳಿಯ ಸಭೆಯನ್ನು ಮೈಸೂರಿನಲ್ಲೇ ನಡೆಸುತ್ತಿದ್ದು, ಈ ಬಾರಿ ಹೈದ್ರಾಬಾದ್ - ಕರ್ನಾಟಕ ಪ್ರದೇಶಾಭಿವೃದ್ಧಿ ಕಡೆಗಳಲ್ಲಿ ವ್ಯವಸ್ಥಾಪನಾ ಮಂಡಳಿ ಸಭೆಯನ್ನು ನಡೆಸುವುದು ಸೂಕ್ತವೆಂದು ತಿಳಿಸಿ, ಮುಂದಿನ ವ್ಯವಸ್ಥಾಪನಾ ಮಂಡಳಿ ಸಭೆಯನ್ನು ಗುಲ್ಬರ್ಗಾದಲ್ಲಿ ನಡೆಸಲು ಸದಸ್ಯರಾದ ಶ್ರೀ ಅಡಗೂರು ಹೆಚ್.ವಿಶ್ವನಾಥ್ ರವರು ಸಭೆಗೆ ತಿಳಿಸಿದರು.

ಸದಸ್ಯರಾದ ಶ್ರೀ. ಬಿ.ಜಿ. ಪಾಟೀಲ್‌ರವರು ಮಾತನಾಡಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮುಂದಿನ ವ್ಯವಸ್ಥಾಪನಾ ಮಂಡಳಿ ಸಭೆಯನ್ನು ಗುಲ್ಬರ್ಗಾದಲ್ಲಿ ಹಮ್ಮಿಕೊಳ್ಳಲು ವ್ಯವಸ್ಥಾಪನಾ ಮಂಡಳಿ ಹಿರಿಯ ಸದಸ್ಯರಾದ ಶ್ರೀ ಅಡಗೂರು ಹೆಚ್.ವಿಶ್ವನಾಥ್ ರವರಿಗೆ ಅಭಿನಂದನೆ ಸಲ್ಲಿಸಿ, ಈ ರೀತಿ ಹಿಂದುಳಿದ ಪ್ರದೇಶಗಳಲ್ಲಿ ಸಭೆಗಳನ್ನು ಹಮ್ಮಿಕೊಳ್ಳುವುದರಿಂದ ಒಳ್ಳೆಯದು ಎಂಬ ಅಭಿಪ್ರಾಯವನ್ನು ಸಭೆಗೆ ಹಂಚಿಕೊಂಡರು.

ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಮುಂದಿನ ವ್ಯವಸ್ಥಾಪನಾ ಮಂಡಳಿ ಸಭೆಯನ್ನು ಗುಲ್ಬರ್ಗಾದಲ್ಲಿ ನಡೆಸಲು ಎಲ್ಲಾ ಸದಸ್ಯರು ಒಮ್ಮತದಿಂದ ಒಪ್ಪಿದರು.

ಇದಕ್ಕೆ ಮಾನ್ಯ ಕುಲಪತಿಗಳು ಮಾನ್ಯ ಸದಸ್ಯರು ಒಳ್ಳೆಯ ಅಭಿಪ್ರಾಯವನ್ನು ನೀಡಿದ್ದು, ಅದರಂತೆ ಮುಂದಿನ ವ್ಯವಸ್ಥಾಪನಾ ಮಂಡಳಿ ಸಭೆಯನ್ನು ಗುಲ್ಬರ್ಗಾದಲ್ಲಿ ನಡೆಸಲಾಗುವುದೆಂದು ಸಭೆಗೆ ತಿಳಿಸಿದರು. ಮುಂದುವರೆದಂತೆ ಜಂಟಿ ಕಾರ್ಯದರ್ಶಿ, ಹಣಕಾಸು ಇಲಾಖೆ ಇವರೂ ಸಹ ಸಭೆಗೆ ಆಗಮಿಸುವಂತೆ ಕೋರಿದರು.

ಅಂತಿಮವಾಗಿ, ವ್ಯವಸ್ಥಾಪನಾ ಮಂಡಳಿಯ 174ನೇ ಸಾಮಾನ್ಯ ಸಭೆಗೆ ಹೊಸದಾಗಿ ಸೇರ್ಪಡೆಯಾಗಿರುವ ಸರ್ಕಾರದ ಪ್ರತಿನಿಧಿಗಳಾದ ಶ್ರೀ.ಕೆ. ಹರೀಶ್‌ಗೌಡ ಮತ್ತು ಶ್ರೀ. ಡಿ.ರವಿಶಂಕರ್ ರವರುಗಳಿಗೆ ಮಾನ್ಯ ಕುಲಪತಿಗಳು, ಶಾಸನಬದ್ಧ ಅಧಿಕಾರಿಗಳು ಹಾಗೂ ವ್ಯವಸ್ಥಾಪನಾ ಮಂಡಳಿ ಸದಸ್ಯರುಗಳು ಹೊಸ ಸದಸ್ಯರುಗಳನ್ನು ಸಭೆಯಲ್ಲಿ ಸನ್ಮಾನಿಸಲಾಯಿತು.

ಅಂತಿಮವಾಗಿ, ವ್ಯವಸ್ಥಾಪನಾ ಮಂಡಳಿಯ 174ನೇ ಸಾಮಾನ್ಯ ಸಭೆಗೆ ಆಗಮಿಸಿ ಮಂಡಿಸಲಾದ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿರುವುದಕ್ಕೆ ಮಾನ್ಯ ಕುಲಪತಿಗಳು ಎಲ್ಲಾ ಸದಸ್ಯರುಗಳಿಗೂ ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

**ಕುಲಪತಿಗಳು** **ಕುಲಸಚಿವರು**